# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XXI - 6 ಜೂನ್ 2003

### ಈ ಸಂಚಿಕೆಯಲ್ಲಿ

ಅಸೋಸಿಯೇಶನ್‌ನಲ್ಲಿ :

"Theatre workshop" Summer Activity ● Rama Vasant 2 - 16

May Play-Reading ● Ahalya Ballal 3

Forthcoming Programmes

An Interview with Ms. Shaili Sathyu ● Bhavani 4

ಭಾರತೀಯ ಕಲೆ - ಭಾಗ 15 5

ಕೃಪೆ : ಎನ್. ಮರಿಶಾಮಾಚಾರ್‌ರವರ ಭಾರತೀಯ ಕಲೆ

ಧನಿಯರ ಸತ್ಯನಾರಾಯಣ ● ಕೊರಡ್ಕಲ್ ಶ್ರೀನಿವಾಸರಾವ್ 9

ಸಾರಸ್ವತ ಲೋಕಕ್ಕೆ ಕನ್ನಡಿಗರ ಅದ್ಭುತ ಕೊಡುಗೆ - ಸಿರಿ ಭೂವಲಯ ● ವೈ.ಕೆ. ಮೋಹನ್ 11

ಸುತ್ತ-ಮುತ್ತ 14

**Rs. 5/-**

The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 ● Grams: "KARUNADU"

ಅನೇಕಮುಖದಲ್ಲಿ

# "THEATRE WORKSHOP" Summer Activity

*- Rama Vasant*

Oh God! Children's exams are over, Holidays have started, it is too hot this summer. What to do? Where to go? No place to go, No body to call us. There is no water at some places, No electricity at some places, Children will be either playing in the hot sun or watching the T.V. for the whole day, I have to go to office, husband will be on tour, How to look after the children? How to engage and entertain them? This is the plight of so many mothers during the holidays, but not to worry. Our Association has something lined up to meet these children's demand.



***Mr. Prasad, Ms. Sulasha Arya and Ms. Shaili Sathyu in a jovial mood while handing over a bouquet***



***Ms. Shaili Sathya with the group of participant of the "Theatre Workshop"***

The Association jointly with IPTA and Yatri has started a theatre workshop called 'Rang Shibir' for the children between the age of 6 years to 16 years. They have 3 workshops of 10 day duration each, The workshops will cover various aspects such as puppet making, Collage and craft, movement, speech, sound, skits, dancing etc. These features are taught to the child in an enjoyable manner. It is planned to help the child in developing its overall personality.

The puppetry was taught by Ms. Shaili Satyu, a person with wide ranging interest and experience. She writes short stories for children. A good production designer, costume designer, backstage manager, she has worked with well known Directors like Satyadev Dubey, Prasanna, Prema Karant, M. S. Sathyu and others. She has staged puppet plays and held many puppetry and theatre workshops. On 11th May, after the 10 days long workshop, she presented a puppet play by the children. The puppets

*(contd. pg. 16)*



***A scene from the puppet show staged by children on 11th May, 2003.***

# MAY PLAY-READING

## "THE DUMB WAITER"

*Ahalya Ballal*

The May play-reading at the Mysore Association presented fairly different from the ones featured so far in the monthly series. British dramatist Harold Pinters "The Dumb waiter'' provided an unusual experience to the normal Kannadiga theatre-goers of Mumbai, in that it does not cater exclusively to the "entertainment" aspect. This one-act play, written in 1957, has just two characters Ben and Gus, hired assassins who work for some unknown organization. The setting is a basement room in Birmingham. The two men are ill-at-ease as they await their unknown victim. Their "superior", again unseen and unknown, issues instructions which they are bound to follow to the hilt. They have no access to the outside world (no windows) and it is presumed that they comply absolutely. A mechanical dumb waiter descends from the kitchen above (manned by unknown people), but Ben and Gus do not get what they ask for the arrival and departure of the dumb waiter only makes them more and more anxious, until it is revealed that Gus, one of the supposed assassins, is the victim himself. All the while, he was the one posing uncomfortable questions, seeking answers where none was forthcoming!

Like many good works of art, this play too may be interpreted on more than one level. The situation presented is partly credible, partly absurd and ends in the violent invasion of the individual security. It may be mentioned here that Harlod Pinter is considered one of the leading playwrights of the theatre of the absurd. This concept (Theatre of the absurd) indicates the discrepancy between human reason and aspiration and an indifferent and hostile universe. Many absurd plays are also concerned with an irrational human society than with the universe.

As always, the discussion that followed the reading session drew varied responses from the members of the audience. At one level, it seemed a confrontation between the individual and the system which does not encourage or even anticipate dissent and questioning and sometimes reacts very violently. At another level, it displayed the utter hopelessness and helplessness of the individual fighting against the universe, which is all powerful and leaves him with no choice but total surrender. (Gus, the victim finally realizes this at the very end when he is practically manhandled). In the Indian context, this would probably translate to Sharanagati or total surrender of the Jeevatma to the absolute Paramatma.

It is worthwhile remembering that there are plays and plays. Some of them tell neat stories, while some of them present "experiences" which are common to people of all times and all climes regardless of nationality, creed, gender etc. Many of us have, at various points in our lives, felt utterly helpless against unknown forces that appear vague, sinister and sometimes violent. In "The Dumb Waiter", this feeling is implicit.

At the reading, some observed who were "waiting for something to happen" noted that the play was too long and tidious. Another astute observer noted that of the two assassins, Ben the unquestioning one survived, whereas Gus had to pay for his inquisitiveness.

Drama, unlike other literary works is more complex in that it also has a performing aspect to it, and it is not a simple 1:1 relationship between the writer and the reader. The whole process consists of playwright, performer and an unknown vast audience. At this particular reading, one walked away with the feeling that a larger audience would have definitely brought forward many more interesting and varied responses!

## THE MYSORE ASSOCIATION, BOMBAY

### FORTH COMING PROGRAMMES

| Date | Programme | Time | Venue |
|---|---|---|---|
| 10th June 03 | Weekly Ganapathi Pooja<br>Ganapati Sahasra Nama Archane<br>Prasada Viniyoga<br>Sevartha Rs.25/- | 7.30 p.m | Ground Floor |
| 17th June 03 | Sankashta Chaturthi Ganapathi Pooja<br>Ganapathi Sahasra Nama Archane<br>Prasada Viniyoga<br>Sevartha Rs.51/- | 7.30 p.m | Ground Floor |
| 23rd June 03 | Play Reading<br>by Sri N. Balakrishna Nidwannayya<br>& Party Kannada Play<br>"Vriddhashrama" | 7.00p.m | Auditorium<br>2nd Floor |
| 24th June 03 | Weekly Ganapathi Pooja<br>Ganapati Sahasra Nama Archane<br>Prasada Viniyoga<br>Sevartha Rs. 25/- | 7.30p.m | Ground Floor |
| 1st July 03 | Weekly Ganapathi Pooja<br>Ganapathi Sahasra Nama Archane<br>Prasada Viniyoga<br>Sevartha Rs.25/- | 7.30p.m | Ground Floor |
| 8th July 03 | Weekly Ganapathi Pooja<br>Ganapathi Sahasra Nama Archane<br>Prasada Viniyoga<br>Sevartha Rs.25/- | 7.30p.m | Ground Floor |

# An Interview with Ms. Shaili Sathyu

Bhavani

The Mysore Association, Bombay has been conducting theatre workshop for Children since May 1st 2003. So far two batches have completed their course of 10 days. The third and the last batch is in progress. The Mysore Association has a long history of theatre activity spread over the last 7 decades. In line with its desire to establish a composite Training Centre for performing Arts, the Association took on organising the theatre workshops jointly with well known theatre grimps like IPTA and YATRI of Mumbai. The workshops are being conducted by the experienced professionals such as Ms. Shaili Sathyu of IPTA and Mr. Om Katare of Yatri, India. A batch of 12 children aged 6 to 10 years was trained by Ms. Shaili Satyu from May 1st to May 10th in the art of puppet making and staging puppet shows. Another batch of 35 children aged 10 to 16 years was trained by Mr. Om Katare from 15th May to 25th in the art of acting and stag craft. The third batch which started on 27th May, has 23 children. The first five days of this group were taken by Ms. Shaili Sathyu. The last 5 days are being taken by Mr. Om Katare. At the end there was a presentation ceremony at which the participants gave a presentation on what they learnt in the course. In the context of these on going workshops, Nesaru interviewed Ms. Shaili Satyu. Here are the excerpts.

N: What was your first workshop like and when was it?

S: My first workshop was some ten years ago. It was with a group of 5-6 Children of the society where I lived I'm very fond of Children and had been knowing them all along. Then I was also into the art of Puppet Making. I was asked to conduct a workshop for these Children. I just agreed to try out. And that's how it started.

N: What had the content been like?

S: It was for a period of two weeks. It was not structured in the sense the Children decided what they wanted to do. It includes every thing from watching T.V, dancing, going on Picnics, Puppet making, Story telling. It was basically a general thing to do.

N: Did you then make it a regular Summer Activity?

S: There was a tremendous response to the first workshop. So we made it a regular activity. The workshops were more focused.

N: What do you teach in these workshops?

S: Children learn to make and relate to the puppets. The puppets are not the string puppets. Children find the string puppets difficult to manage. Also these puppets are different from dolls. With puppets, you get to show different emotions by coordinating your finger movements. The voice too is required to coordinate with the finger movements. Since the shows are generally telling a story, the children are required to get sensitive to the story, visualize it and act it out before actually performing with the puppets. All this forms part of the workshop.

N: What do you expect from the participants?

S: There are no expectations. That's what I tell the parents too. All children are capable of learning new things. I only help them to be better than what they are at that stage through a new experience.

N : But surely some children are brighter that others while some may be more dominating. Then how do you fit them all in a group?

S : That's bound to be. I make them form smaller groups where the more dominating and the bright are put in different groups. They are then made to help the milder and hesitant children in their groups to be more active. Thus a cohesive group is formed.

N: Have you had workshops with other organizations too?

S: Different sessions for story telling, poetry reading, etc. have been held in different settings. I also had workshops with children of construction workers who had no formal education in Andhra Pradesh near Tirupathi. But this is first of its kind in the sense that two organisations are jointly involved.

N: What about the parents' expectations? Do you interact with parents too?

S: The parents are also involved. Certainly they are anxious to know what their children are likely to learn. On the first day of the workshop, the parents are invited with the children. They are told that they cannot expect their children to become Shah Rukh Khan or Aishwarya Rai. The children are not going to be coached to become super stars. They are just going to learn a new skill and be better than what they are today. They are encouraged to be more open and be able to express themselves. When the parents see at the end what their children have done in the workshop, they are very happy and want to know when they can come back again.

N: What are your other interests?

S: I write stories for children. I'm interested in setting up a manufacturing unit for puppets. I'm also involved in theatre activity like stage management. I' would like to stage full-fledged puppet show sometime.

N: Would you like to conduct more workshops for Mysore Association?

S: Let's see. It's for IPTA and Mysore Association to decide. If they request me, depending on my schedule, if time permits, I shall certainly like to continue with it.

N: Thank you and all the best to you for your future.

# ಭಾರತೀಯ ಕಲೆ

ಭಾಗ - 15

ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎನ್. ಮರಿಶಾಮಾಚಾರ್ ಅವರು ಬರೆದಿರುವ ಭಾರತೀಯ ಕಲೆ ಎಂಬ ಪುಸ್ತಕದಿಂದ ಆಯ್ದ ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖ ಸೇವೆಯನ್ನುಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.

ಮಥುರಾ ಕಲೆಯು ಸಾಂಪ್ರದಾಯದಂತೆ ರಚಿತವಾದ ಶಿಲ್ಪಾಕೃತಿಗಳನ್ನು ಸುಲಭವಾಗಿ ಕಂಡುಹಿಡಿಯಬಹುದು. ಏಕೆಂದರೆ ಇದರಲ್ಲಿ ಕೆಂಪು ಚುಕ್ಕೆಗಳುಳ್ಳ ಮರಳು ಕಲ್ಲನ್ನು ಬಳಸಲಾಗುತ್ತಿತ್ತು. ಆದರೆ ಅಲ್ಲಲ್ಲಿ ಹಳದಿ ಮತ್ತು ಬಿಳಿ ದಾರಗಳು, ಮಚ್ಚೆಗಳು ಶಿಲ್ಪಗಳ ಅಂದವನ್ನು ಕೆಡಿಸುವಂತೆ ಸ್ಪಷ್ಟವಾಗಿ ಎದ್ದು ಕಾಣುತ್ತವೆ. ಈ ಲೋಪವನ್ನು ಸರಿಪಡಿಸಲು ಅಲ್ಲಲ್ಲಿ ಬಣ್ಣಗಳನ್ನು ಬಳಸುತ್ತಿದ್ದರು. ಕ್ರಮೇಣ ಮಥುರಾದ ಕಲಾಕೇಂದ್ರಗಳು ವಾಣಿಜ್ಯ ಕಾರ್ಯಾಗಾರಗಳಾದವು. ಪ್ರತಿಮೆಗಳನ್ನು ಶೀಘ್ರಗತಿಯಲ್ಲಿ ತಯಾರಿಸುವ ಕಾರ್ಖಾನೆಗಳಾದುದಲ್ಲದೆ, ಉತ್ತರ ಭಾರತದಲ್ಲೆಲ್ಲಾ ಈ ಪ್ರತಿಮೆಗಳನ್ನು ಮಾರಾಟ ಮಾಡಲಾಗುತ್ತಿತ್ತು. ಈ ಪ್ರತಿಮೆಗಳ ಬೇಡಿಕೆ ಮಹಾಯಾನ ಬೌದ್ಧ ಪಂಥದಲ್ಲಿ ಹೆಚ್ಚಾಯಿತು. ಆದರೆ ಹೀನಾಯಾನ ಪಂಥದವರು ಇವುಗಳನ್ನು ಅಂಗೀಕರಿಸಲಿಲ್ಲ.

ಮಥುರಾದ ಪ್ರಾಮುಖ್ಯವಾದ ಕೊಡುಗೆಯೆಂದರೆ ಭಾವಚಿತ್ರ -ಶಿಲ್ಪಾಕೃತಿಗಳೆಂದು ಹೇಳಬಹುದು. ಇವುಗಳನ್ನು ಪ್ರಾಚೀನ ಭಾರತದ ಮಾದರಿಗಳೆಂದು ಉದಾಹರಿಸಬಹುದು. ದಾನಿಗಳ ಭಾವಚಿತ್ರಗಳನ್ನು ಶಿಲ್ಪದಲ್ಲಿ ರಚಿಸಲಾಗಿದ್ದರೂ ಅವುಗಳಲ್ಲಿ ನೈಜತೆ, ವಿವಿಧತೆಗಳನ್ನು ಕಾಣಲಾರೆವು. ಅವುಗಳು ಎಲ್ಲಾ ಒಂದೇ ವ್ಯಕ್ತಿಯನ್ನು ಕುರಿತಂತೆ ಸಾಮಾನ್ಯತೆ ಎದ್ದು ಕಾಣುತ್ತದೆ.

ಬುದ್ಧನ ಭಾರತೀಯ ಮಾದರಿಯ ಚಿತ್ರಣವನ್ನು ಮಥುರಾ ಶೈಲಿಯಲ್ಲಿ ಕಾಣುತ್ತೇವೆ. ಪ್ರಾರಂಭ ಕಾಲದಲ್ಲಿ ಬುದ್ಧನನ್ನು ಸೂಚಿಸುವ ಬರಿಯ ಚಿಹ್ನೆಗಳನ್ನು ಮಾತ್ರ ರಚಿಸಲಾಗುತ್ತಿತ್ತು. ಏಕೆಂದರೆ ಹೀನಾಯಾನ ಪಂಥವು ಬುದ್ಧನ ಯಾವುದೇ ರೀತಿಯ ಶರೀರ ರಚನಾವ್ಯವಸ್ಥೆಯನ್ನು ವಿರೋಧಿಸುತ್ತಿತ್ತು. ಮಹಾಯಾನ ಪಂಥವು ಪ್ರಾಬಲ್ಯಕ್ಕೆ ಬಂದ ನಂತರ ಬುದ್ಧನನ್ನು ಪ್ರತಿನಿಧಿಸುವ ಹಿಂದಿನ ಸಂಜ್ಞೆ ಚಿಹ್ನೆಗಳ ಬದಲಾಗಿ ಮಾನವಾಕೃತಿಯ ರಚನೆಯು ಪ್ರಸಿದ್ಧಿಗೆ ಬಂದಿತು. ಬುದ್ಧನ ನಿಂತಿರುವ ಭಂಗಿಯನ್ನು ಸಾರನಾಥದ ಪ್ರಾಚ್ಯ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದು. ಶಿಲ್ಪವಿಗ್ರಹವು ದುಂಡಗೆ ಕೊರೆಯಲ್ಪಟ್ಟಿದ್ದರೂ, ಮುಂದಿನಿಂದ ಮಾತ್ರ ನೋಡಬೇಕು. ಮೌರ್ಯರ ಕಾಲದ ಯಕ್ಷರ ವಿಗ್ರಹಗಳನ್ನು ಹೋಲುತ್ತಿದ್ದು, ವಿಶಿಷ್ಟವಾದ ಭಾರತೀಯ ಶೈಲಿಯನ್ನು ಹೊಂದಿರುತ್ತದೆ.

ಕುಳಿತಿರುವ ಭಂಗಿಯಲ್ಲಿ, ಬುದ್ಧನ ಅನೇಕ ಶಿಲ್ಪಗಳ ನಮಗೆ ಕಾಣಸಿಗುತ್ತವೆ. ಮಥುರಾದ ಪ್ರಾಚ್ಯ ವಸ್ತುಸಂಗ್ರಹಾಲಯದಲ್ಲಿರುವ ಕಾತ್ರಾದ ಕುಳಿತಿರುವ ಬುದ್ಧನ ಶಿಲ್ಪಾಕೃತಿಯು ಉತ್ತಮ ಮಾದರಿ ಎಂದು ಹೇಳಬಹುದು. ಶೈಲಿಯಲ್ಲಿ ಭಿಕ್ಷು ಬಾಲಾದ ಬುದ್ಧನನ್ನು ಹೋಲುತ್ತದೆ. ಭಂಗಿ ಮಾತ್ರ ಬೇರೆಯಾಗಿದೆ. ಅಂಗಾಲುಗಳು ಮೇಲಕ್ಕೆ ಕಾಣುವಂತೆ ಕಾಲುಗಳನ್ನು 'X' ರೀತಿಯಲ್ಲಿ ಮಡಚಲಾಗಿದೆ. ಬುದ್ಧನು ಯೋಗ ಮುದ್ರೆಯೊಡನೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ಮಥುರಾದ ಇತರ ಬುದ್ಧನ ವಿಗ್ರಹಗಳ ಹಾಗೆಯೇ ಇತರ ಎಲ್ಲಾ ಅಂಶಗಳನ್ನು ಹೊಂದಿದೆ. ಮುಖದಲ್ಲಿ ಅದೇ ಲಾಸ್ಯ, ಅದೇ ಮುಗ್ಧತೆ, ಅದೇ ವೈರಾಗ್ಯ, ಅದೇ ಕಾರುಣ್ಯ. ವಿಶಾಲವಾದ ಹಣೆ, ಬಿಲ್ಲಿನಂತೆ ಬಾಗಿರುವ ಹುಬ್ಬುಗಳು, ನೀಳ ಮೂಗು, ಮಂದಹಾಸವನ್ನು ಸೂಸುತ್ತಿರುವ ತುಟಿಗಳು, ಬಲ ಅಂಗೈಯಲ್ಲಿ ಚಕ್ರ - ಸ್ಪಷ್ಟವಾಗಿ ಚಿತ್ರಿಸಲಾಗಿವೆ. ಬುದ್ಧನ ಶಿರದ ಹಿಂದುಗಡೆ ಪ್ರಭಾವಳಿಯು ಎದ್ದು ಕಾಣುತ್ತದೆ. ಬಲಗಡೆ ಹಾಗೂ ಎಡಗಡೆ ಒಬ್ಬೊಬ್ಬ ಪರಿಚಾರಕರಿದ್ದಾರೆ. ಇಂದ್ರ ಹಾಗೂ ಬ್ರಹ್ಮ ಎಂದು ಇಬ್ಬರನ್ನು ಗುರ್ತಿಸಲಾಗಿದೆ. ನಂತರದ ಕೃತಿಗಳಲ್ಲಿ ಇವರನ್ನು ವಜ್ರಪಾಣಿ ಮತ್ತು ಪದ್ಮಪಾಣಿ ಎಂಬ ಇಬ್ಬರು ಬೋಧಿಸತ್ವರನ್ನಾಗಿ ಪ್ರತಿಪಾದಿಸಲಾಗಿದೆ.


ಗಾಂಧಾರ ಶೈಲಿಯಲ್ಲಿ ಶರೀರ ರಚನೆಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ. ಆದರೆ ದೈವಿಕ ಲಕ್ಷಣಗಳ ಕೊರತೆ ಎದ್ದು ಕಾಣುತ್ತದೆ. ಮಥುರಾ ಶೈಲಿಯು ಈ ಕೊರತೆಯನ್ನು ನಿವಾರಿಸುವುದಲ್ಲದೆ, ಮಹಾತ್ಮ ಬುದ್ಧನ ಮೊಗದಲ್ಲಿ ನಾವು ನಿರೀಕ್ಷಿಸಬಹುದಾದಂತಹ ಆಧ್ಯಾತ್ಮಿಕ ಸೌಂದರ್ಯವನ್ನು ಸ್ಪಷ್ಟವಾಗಿ ಪ್ರದರ್ಶಿಸುತ್ತದೆ. ಗಾಂಧಾರ ಶೈಲಿಯ ಮೊಗವು ಮುಖವಾಡದಂತೆ ಕೃತ್ರಿಮವಾಗಿ, ನಿರ್ಜೀವವಾಗಿ ಕಾಣುತ್ತಿದ್ದರೆ, ಮಥುರಾ ಶೈಲಿಯ ಮುಖವು ಅವರ್ಣನೀಯ ಸೌಂದರ್ಯವನ್ನು ಹೊಂದಿದ್ದು ದೈವಿಕ ಮಂದಹಾಸವನ್ನು ತೋರುತ್ತದೆ. ಗಾಂಧಾರ ಶೈಲಿಯಲ್ಲಿ ಪಾಶ್ಚಿಮಾತ್ಯ ಕಲೆಯ ನೆರಳು ಸ್ಪಷ್ಟವಾಗಿ ಕಾಣಬಹುದು. ಆದರೆ ಮಥುರಾ ಶೈಲಿಯು ಅಪ್ಪಟ ಭಾರತೀಯತೆಯನ್ನು ಸೂಚಿಸುತ್ತದೆ.

ಕುಶಾನರಿಗೆ ಭಾರತೀಯ ಕಲೆಯು ತುಂಬಾ ಋಣಿಯಾಗಿದೆ. ಗಾಂಧಾರ ಹಾಗೂ ಮಥುರಾ ಶೈಲಿಗಳಿಗೆ ಅವರಿತ್ತಿರುವ ಪ್ರೋತ್ಸಾಹವೇ ಅವುಗಳ ಅಭಿವೃದ್ಧಿಗೆ ಕಾರಣ. ಶಿಲ್ಪಕಲೆಯು ಪ್ರೌಢಾವಸ್ಥೆಯನ್ನು ತಲುಪಲು ಇವರೇ ಕಾರಣೀಭೂತರೆಂದು ಹೇಳಿದರೆ ಅತಿಶಯೋಕ್ತಿಯಲ್ಲ.

### ಶಾತವಾಹನರು ಮತ್ತು ಇಕ್ಷ್ವಾಕರು

ಕೊನೆಯ ಶಾತವಾಹನರ ಆಳ್ವಿಕೆಯ ಕಾಲದಲ್ಲಿ (ಕ್ರಿ.ಶ. ೧೨೪-೨೨೫) ಅಮರಾವತಿಯು ಕಲಾ ಚಟುವಟಿಕೆಗಳ ಕೇಂದ್ರವಾಗಿತ್ತು. ಡೆಕ್ಕನ್ನಿನಿಂದ ಹಿಮ್ಮೆಟ್ಟಲ್ಪಟ್ಟ ನಂತರ ಅವರು ಪೂರ್ವ ದಿಕ್ಕಿನ ಕಡೆಗೆ ಹೋಗುತ್ತಾ ಕೃಷ್ಣಾ ಮತ್ತು ಗೋದಾವರಿ ಕಣಿವೆಗಳನ್ನು ಆಕ್ರಮಿಸಿ ಪೂರ್ವ ಸಮುದ್ರ ತೀರದವರೆಗೆ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡರು. ಉತ್ತರದಲ್ಲಿ ಕುಶಾನರ ಜೊತೆಗೆ ವಾಣಿಜ್ಯ ಸಂಬಂಧಗಳನ್ನು ಬೆಳೆಸಿಕೊಳ್ಳುವುದಲ್ಲದೆ, ಭಾರತದ ಹೊರಗಿನ ಪೂರ್ವ ಮತ್ತು ಪಶ್ಚಿಮ ದೇಶಗಳೊಂದಿಗೂ ವ್ಯಾಪಾರವನ್ನು ಪ್ರಾರಂಭಿಸಿದರು. ಟಾಲೆಮಿಯಿಂದ ಈ ವಿಷಯವು ನಮಗೆ ಗೊತ್ತಾಗುತ್ತದೆ. ರೋಮನ್ ವ್ಯಾಪಾರವು ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿ ಪ್ರದೇಶಗಳೊಂದಿಗೆ ಸಾಗಿತ್ತೆಂದು ಹೇಳುತ್ತಾನೆ.

ಕ್ರಿ.ಪೂ. ಎರಡನೇ ಹಾಗೂ ಮೂರನೇ ಶತಮಾನಗಳ ಕಾಲದಲ್ಲಿ ಕೃಷ್ಣಾ ನದಿ ಕೊಳ್ಳ ಪ್ರದೇಶದಲ್ಲಿ ಪ್ರಸಿದ್ಧವಾಗಿದ್ದ ಅಮರಾವತಿಯನ್ನು



ಅಮರಾವತಿ, ಶಾತವಾಹನರು

ಬೌದ್ಧ ಭಿಕ್ಷುಗಳನೇಕರು ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದರು. ಈಗಿನ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯಲ್ಲಿರುವ ಪಲ್ನಾಡು ಪ್ರಾಂತವಿದು. ಆ ಪ್ರದೇಶದಲ್ಲಿ ಸಿಕ್ಕಿರುವ ಸ್ತೂಪ, ವಿಹಾರಗಳ ಅವಶೇಷಗಳು ಈ ವಿಷಯವನ್ನು ಋಜುವಾತು ಪಡಿಸುತ್ತವೆ. ಅಮರಾವತಿ, ಭಟ್ಟಿಪ್ರೋಲು, ಜಗ್ಗಯ್ಯಪೇಟ, ಪೆದ್ದಮದ್ದೂರು, ಪೆದ್ದಗಂಜಾಂ, ಗುಡಿವಾಡ, ಘಂಟಸಾಲ, ನಾಗಾರ್ಜುನಕೊಂಡ, ಗೋಲಿ ಮುಂತಾದ ಪ್ರದೇಶಗಳು ಬೌದ್ಧ ವಿಹಾರಗಳ ಕೇಂದ್ರಗಳಾಗಿದ್ದವು.

ಶಾತವಾಹನ ವಂಶಜರ ಕಾಲದಲ್ಲಿ ದಕ್ಷಿಣ ಭಾರತವು ಭಾರತೀಯ ಕಲೆಯ ಕೇಂದ್ರವಾಗಿತ್ತು. ಈ ಅರಸರ ಪ್ರೋತ್ಸಾಹದಿಂದಾಗಿ ಕಲೆಯು ವೈಭವೋಪೇತ ದೆಶೆಯನ್ನು ತಲುಪಿತ್ತು. ವಿಶೇಷವಾಗಿ ಶಾತಕರ್ಣಿ ಹಾಗೂ ಗೌತಮ ಪುತ್ರಶಾತಕರ್ಣಿ ಎಂಬ ಶಾತವಾಹನ ಅರಸರು ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಈ ಉತ್ತೇಜನದಿಂದ ರಚಿತವಾದ ಕಲಾಕೃತಿಗಳು ಪಲ್ಲವರಿಗೆ ಮಾರ್ಗದರ್ಶಿಯಾದುವಲ್ಲದೆ, ಅವರಿಂದ ಈ ಸಂಪ್ರದಾಯವು ದೂರಪ್ರಾಚ್ಯ ದೇಶಗಳಿಗೆ ಹರಡುವಂತಾಯಿತು. ಪದೇ ಪದೇ ಸಂಭವಿಸುತ್ತಿದ್ದ ಯುದ್ಧಗಳ ಕಾರಣದಿಂದ, ಅವರ ಶಕ್ತಿಯು ಕುಂಠಿತಗೊಂಡು ಮುಂದೆ ಕಲೆಗಳಿಗೆ ಪ್ರೋತ್ಸಾಹ ಹೆಚ್ಚಿನ ರೀತಿಯಲ್ಲಿ ದೊರೆಯದಂತಾಯಿತು.

ಕ್ರಿ.ಶ. ಮೂರನೇ ಶತಮಾನದ ಪ್ರಾರಂಭದಲ್ಲಿ ಶಾತವಾಹನರು ಇಕ್ಷ್ವಾಕರಿಂದ ಪರಾಜಯಗೊಂಡರು. ಮೊದಲನೇ ಶಾಂತ ಮುಲನು ಈ ವಂಶದ ಸ್ಥಾಪಕನು. ನಾಗಾರ್ಜುನ ಕೊಂಡದ ಸಮೀಪವಿರುವ ವಿಜಯ ಪುರಿಯಿಂದ ತನ್ನ ಆಡಳಿತ ನಡೆಸಿದನು. ಶಾಂತಮುಲನು ಹಿಂದೂ ಧರ್ಮದವನಾದರೂ, ಅವನ ನಂತರದ ದೊರೆಗಳು ವಿಶೇಷವಾಗಿ ಅವರ ಕುಟುಂಬಗಳ ಮಹಿಳೆಯರು ಬೌದ್ಧ ಧರ್ಮವನ್ನು ಮೆಚ್ಚಿದರು. ಆದರೆ ಈ ಶತಮಾನದ ಕೊನೆಗೆ ಅದೇ ತಾನೇ ಪ್ರಸಿದ್ಧಿಗೆ ಬರುತ್ತಿದ್ದ ಪಲ್ಲವರಿಗೆ ಈ ವಂಶಜ ಅರಸರು ಶರಣಾಗತರಾದರು.

ಅಮರಾವತಿಯಲ್ಲಿರುವ ಬೃಹತ್ ಸ್ತೂಪವು ಕೊನೆಯ ಶಾತವಾಹನರ ಅತ್ಯುತ್ತಮ ಶೈಲಿಯನ್ನು ಪ್ರತಿನಿಧಿಸುತ್ತದೆ. ಅಮರಾವತಿಯ ಶಿಲ್ಪಗಳನ್ನು ನಾಲ್ಕು ಹಂತಗಳನ್ನಾಗಿ ವಿಂಗಡಿಸಬಹುದು. ಮುಖ್ಯವಾಗಿ ಸ್ತೂಪಾಂಡದ ಮೇಲೆ ಕೆತ್ತಲಾಗಿರುವ ಉಬ್ಬು ಚಿತ್ರಗಳನ್ನು ಪರಿಗಣಿಸಬೇಕು. ಮೊದಲನೆಯದು ಭಾರ್ಹೂಟ್ ಶಿಲ್ಪಗಳನ್ನು ಹೋಲುವುದರಿಂದ, ಆ ಕಾಲಕ್ಕೆ ಸೇರಿದವೆಂದು ಊಹಿಸಬಹುದು. ಎರಡನೆಯದು ಕ್ರಿ.ಶ. ಒಂದನೇ ಶತಮಾನದ ಹತ್ತಿರಕ್ಕೆ ಸೇರಿದವೆಂದು ಖಚಿತಪಡಿಸಬಹುದು. ಅವು ತುಂಡು ಚಿತ್ರಗಳಾಗಿದ್ದು, ಹಾಸುಗಲ್ಲುಗಳ ಮೇಲೆ ಕೆತ್ತಿಸಿ ಅಂಟಿಸಿದ ಹಾಗೆ ಕಾಣುತ್ತವೆ. ಮೂರು ಮತ್ತು ನಾಲ್ಕನೇ ಹಂತದ ಚಿತ್ರಗಳು ಹೆಚ್ಚಾಗಿ ಕ್ರಿ.ಶ. ೧೫೦ರಿಂದ ೨೫೦ ವರೆಗಿನ ಅವಧಿಗೆ ಸೇರಿದವೆಂದು ಹೇಳಬಹುದು. ಇವು ಮಥುರಾ ಮತ್ತು ಕುಶಾನರ ಕಾಲಕ್ಕೆ ಸಂಬಂಧಿಸಿದ್ದು, ಉತ್ತಮ ಶೈಲಿಯಿಂದ ಕೂಡಿವೆ. ಮೊದಲನೆಯ ಅವಧಿಗೆ ಸೇರಿದ ಶಿಲ್ಪಗಳು ಕೆಲವು ಮಾತ್ರ ಉಳಿದಿವೆ. ಚಿತ್ರಗಳು ಗಡುಸಾಗಿದ್ದು, ಶರೀರದ ಅಂಗರಚನೆಯಲ್ಲಿ ಲೋಪಗಳು ಎದ್ದು ಕಾಣುತ್ತವೆ. ಬಿಗಿಯಾದ ಬೆರಳುಗಳು, ಭಾವನಾರಹಿತ ಬಾಗಿದ ಕಣ್ಣುಗಳು, ಒರಟಾದ ತುಟಿಗಳು, ಅಡ್ಡಾತಿಡ್ಡಿಯಾಗಿ ಅಲಂಕರಿಸಿದ ಆಭರಣಗಳು ಮುಂತಾದುವು ಆ ಅವಧಿಯ ಶಿಲ್ಪ ಕಲಾ ಶೈಲಿಯಲ್ಲಿರುವ ಕುಂದುಕೊರತೆಗಳನ್ನು ಎತ್ತಿ ತೋರಿಸುತ್ತವೆ. ಸ್ತ್ರೀಯರನ್ನು ಹೆಚ್ಚು ನಗ್ನತೆಯಿಂದ ತೋರಿಸಲಾಗಿದೆ. ಜಗ್ಗಯ್ಯ ಪೇಟೆ ಅಂಕಣ ಫಲಕದಲ್ಲಿ ತೋರಿಸಲಾದ ಮಂಧತ ಚಕ್ರವರ್ತಿ, ಅಮರಾವತಿಯ ಬುದ್ಧನ ತಲೆ ಮತ್ತು ಅನೋತತಾ ಸರೋವರದಲ್ಲಿ ಮಾಯಾ ಸ್ನಾನ ಮಾಡುತ್ತಿರುವುದು ಮುಂತಾದ ಮದ್ರಾಸಿನ ಮ್ಯೂಜಿಯಂನಲ್ಲಿ ನೋಡಬಹುದಾದ ಶಿಲ್ಪಾಕೃತಿಗಳು ಮೇಲೆ ವಿವರಿಸಿದ ನ್ಯೂನತೆಗಳನ್ನು ತೋರಿಸುತ್ತವೆ. ಈ ಚಿತ್ರಗಳ ಶೈಲಿಯನ್ನು ಗಮನಿಸಿದಲ್ಲಿ ಇವು ಎರಡನೇ ಅವಧಿಗೂ ವಿಸ್ತರಿದವೆಂಬುದನ್ನು ಊಹಿಸಬಹುದು. ಮೂರನೆಯ ಅವಧಿಗೆ ಸೇರಿದುವನ್ನು ವೇದಿಕೆಯ ಮೇಲೆ ನೋಡಬಹುದು. ಇವು ಹೆಚ್ಚು ಮೃದುತ್ವವನ್ನೂ, ನಾಜೂಕನ್ನೂ ಹೊಂದಿವೆ. ಮದ್ರಾಸಿನ ಮ್ಯೂಜಿಯಂನಲ್ಲಿರುವ ಬುದ್ಧನ ಸ್ಮಾರಕಗಳನ್ನು ಕೊಂಡೊಯ್ಯುತ್ತಿರುವ ಅಮರಾವತಿಯ ಶಿಲ್ಪಚಿತ್ರವನ್ನು ಈ ಅವಧಿಗೆ ಸೇರಿಸಬಹುದಾಗಿದೆ. ಇದೇ ಮ್ಯೂಜಿಯಂನಲ್ಲಿರುವ ಪದಕ ಶಿಲ್ಪ ಚಿತ್ರವನ್ನೂ ಇಲ್ಲಿ ಉದಾಹರಿಸಬಹುದು ನಲಗಿರಿಯೆಂಬ ಮದಿಸಿದ ಆನೆಯ ಸೊಕ್ಕನ್ನಡಗಿಸುವ ವೈಖರಿಯನ್ನು ಇಲ್ಲಿ ಚಿತ್ರಿಸಲಾಗಿದೆ. ಈ ಪದಕದಲ್ಲಿ ಎರಡು ಘಟನೆಗಳ ಕಥೆಯನ್ನು ತೋರಿಸಲಾಗಿದೆ. ಎಡದಲ್ಲಿ ಆ ಪ್ರಾಣಿಯು ಇಬ್ಬರ ಮೇಲೆ ದಾಳಿ ಮಾಡಿ ಇತರ ಜನರನ್ನು ಭಯಪೀಡಿತರನ್ನಾಗಿ ಮಾಡಿದೆ. ಒಬ್ಬನನ್ನು ಕೆಳಗೆ ಕೆಡವಿ, ಮತ್ತೊಬ್ಬನ ಕಾಲುಗಳನ್ನು ತನ್ನ ಸೊಂಡಿಲಿನಿಂದ ಹಿಡಿದುಕೊಂಡಿದೆ. ಹತ್ತಿರದಲ್ಲಿ ಈ ದೃಶ್ಯವನ್ನು ನೋಡಿದ ಮಹಿಳೆಯೊಬ್ಬಳು ಗಾಬರಿಗೊಂಡು ಪಕ್ಕದಲ್ಲಿರುವ ತನ್ನ ಸ್ನೇಹಿತೆಯನ್ನು ಕಟ್ಟಿಕೊಳ್ಳುತ್ತಾಳೆ. ಹತ್ತಿರದ ಮನೆಯೊಂದರ ಕಿಟಿಕಿಯಿಂದ ಕೆಲವರು ನೋಡುತ್ತಿರುವುದು ಹಾಗೂ ತಾವು ಮನೆಯೊಳಗೆ ಭದ್ರವಾಗಿರುವೆವೆಂಬ ಧೈರ್ಯ ಅವರ ಮುಖಗಳಲ್ಲಿ ಕಾಣಿಸುತ್ತಿರುವುದು ತುಂಬಾ ಸೊಗಸಾಗಿ ಚಿತ್ರಿತವಾಗಿದೆ. ಬಲಗಡೆಯಲ್ಲಿ ಬುದ್ಧನನ್ನು ಕಂಡೊಡನೆ, ಇದೇ ಆನೆಯು ಸೊಕ್ಕಡಗಿ, ಬಾಗಿ ನಮಸ್ಕರಿಸುತ್ತಿರುವುದನ್ನು ರೂಪಿಸಲಾಗಿದೆ. ಪದಕದ ಈ ಭಾಗದ ಅಂಚು ಸವೆದಿರುವುದರಿಂದ ಬುದ್ಧನು ಪದಕದಲ್ಲಿ ಕಾಣಿಸದಂತಾಗಿದೆ. ನಾಲ್ಕನೇ ಅವಧಿಯ ಚಿತ್ರಗಳು ಉದ್ದವಾಗಿಯೂ, ತೆಳುವಾಗಿಯೂ ಕಂಡು ಬರುತ್ತವೆ. ಮೊಟ್ಟ ಮೊದಲ ಬಾರಿಗೆ ಈ ಹಂತದಲ್ಲಿ ಸ್ತ್ರೀಪುರುಷರು ಮುತ್ತುಗಳಿಂದ ಅಲಂಕರಿಸಲ್ಪಟ್ಟ ಯಜ್ಞೋಪವೀತವನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಈ ಅವಧಿಯಲ್ಲಿ ಹೆಚ್ಚಾಗಿ ಎಲ್ಲ ಆಭರಣಗಳನ್ನು ಮುತ್ತುಗಳಿಂದ ತಯಾರಿಸಲಾಗಿತ್ತೆಂಬುದನ್ನು ಸೂಚಿಸಲಾಗಿದೆ. ಅಮರಾವತಿಯ ಶಿಲ್ಪಿಗಳ ಕಾರ್ಯ ನಿಪುಣತೆಯನ್ನು ಈ ಶಿಲ್ಪಗಳು ಚೆನ್ನಾಗಿ ತೋರಿಸುತ್ತವೆ. ಭಾರತೀಯ ಶಿಲ್ಪಕಲೆಯ ಮುಂದಿನ ಹಂತಗಳಿಗೆ, ಅಮರಾವತಿಯ ಈ ಉಬ್ಬು ಚಿತ್ರಗಳು ಉತ್ತೇಜನ ನೀಡಿವೆ ಎಂದು ಹೇಳಬಹುದು.

ನಾಗಾರ್ಜುನ ಕೊಂಡ ಎಂಬ ಪ್ರದೇಶವು ಇಕ್ಷ್ವಾಕು ಶಿಲ್ಪಕಲಾ ಶೈಲಿಯ ಕೇಂದ್ರ ಸ್ಥಳವಾಗಿತ್ತು. ಬೌದ್ಧ ಸನ್ಯಾಸಿಯಾದ ನಾಗಾರ್ಜುನನು ಇಲ್ಲಿ ಬೌದ್ಧ ಧರ್ಮದ ಮಾಧ್ಯಮಿಕ ಶಾಲೆಯೊಂದನ್ನು ಪ್ರಾರಂಭಿಸಿದನು. ಇಕ್ಷ್ವಾಕು ಶೈಲಿಯ ಕಲಾಕೃತಿಗಳು ಅಮರಾವತಿಯ ಕೊನೆಯ ಹಂತದ ಕೃತಿಗಳನ್ನು ಹೋಲುತ್ತವೆ. ಚಿತ್ರಗಳ ವಿಷಯ, ರಚನೆ ಮತ್ತು ಸಿದ್ಧತೆಗಳಲ್ಲಿ ತುಸು ವ್ಯತ್ಯಾಸಗಳನ್ನು ಕಾಣುತ್ತೇವೆ. ಬುದ್ಧನ ಮಾನವಾಕೃತಿಯನ್ನು ರಚಿಸಿದರೂ, ಚಿಹ್ನೆಗಳನ್ನೂ ಇಲ್ಲಿ ಬಳಸಲಾಗಿದೆ. ಇಕ್ಷ್ವಾಕು ಶೈಲಿಯ ಶಿಲ್ಪಗಳನ್ನು ಕೂಡ ಎರಡು ಭಾಗಗಳನ್ನಾಗಿ ವಿಭಜಿಸಬಹುದು. ಮೊದಲನೆಯದು, ಒಂದನೇ ಶಾಂತಮುಲ್ಲನ ಕಾಲದ್ದು. ಇವು ಸ್ಮಾರಕ ಸ್ತಂಭಗಳು ಮತ್ತು ಡೋಲು ಹಾಸುಗಲ್ಲುಗಳಿಂದ ಕೂಡಿವೆ. ಶಾಂತಮುಲ್ಲನ ಜೀವನ ಚರಿತ್ರೆಗೆ ಸಂಬಂಧಪಟ್ಟ ಹಲವು ದೃಶ್ಯಗಳನ್ನು ಚಿತ್ರಿಸಲಾಗಿದೆ. ಚಿತ್ರಗಳಲ್ಲಿ ಒರಟುತನ ಎದ್ದು ಕಾಣುತ್ತದೆ. ಅಮರಾವತಿಯ ಶೈಲಿಯನ್ನು ಇನ್ನೂ ಅನುಕರಿಸಲಾಗಿಲ್ಲ ಎಂಬುದು ತಿಳಿಯುತ್ತದೆ. ಬಹುಶಃ ಶಾತವಾಹನರ ನಂತರ ಉಂಟಾದ ಅಸ್ಥಿರ ಆಡಳಿತವೇ ಕಾರಣವಾಗಿರಬೇಕು. ಈ ಭಾಗದ ಕಲೆಯು ಕ್ರಮೇಣ ದಕ್ಷಿಣ ಭಾರತದ ಇತರ ರಾಜವಂಶಜರ ಆಡಳಿತ ಕಾರಣದಿಂದಾಗಿ ಮರೆಯಾಯಿತು. ಆದರೂ ಮುಂದಿನ ಪೀಳಿಗೆಗಳ ಕಲಾವಿದರ ಮೇಲೆ ತನ್ನದೇ ಆದ ಪ್ರಭಾವ ಬೀರುವುದರಲ್ಲಿ ಯಶಸ್ವಿಯಾಯಿತು.

ವೀರಪುರುಷದತ್ತನ ಆಡಳಿತ ಪ್ರಾರಂಭವಾದ ಎಂಟನೆಯ ವರ್ಷದಿಂದ ಈ ಹಂತದ ಎರಡನೆಯ ಅವಧಿಯೆಂದು ಹೇಳಬಹುದು. ಉದಾಹರಣೆಗೆ ಬುದ್ಧನ ಮಹಾನಿರ್ಗಮನ ಹಾಗೂ ಆ ಸಂದರ್ಭದ ಸುದ್ದಿಯನ್ನು ಬಿತ್ತರಿಸುವ ದೃಶ್ಯಗಳನ್ನು ಕಂಡಾಗ ಈ ಅಂಶವು ಸ್ಪಷ್ಟವಾಗಿ ತಿಳಿಯುವುದು. ನವದೆಹಲಿಯ ರಾಷ್ಟ್ರೀಯ ಮ್ಯೂಜಿಯಂನಲ್ಲಿ ಈ ಶಿಲಾಚಿತ್ರಗಳನ್ನು ಕಾಣಬಹುದು. ಸಿದ್ಧಾರ್ಥನು ಕುದುರೆಯ ಮೇಲೆ ಕುಳಿತಿದ್ದು, ಹಿಂದುಗಡೆ ಇಂದ್ರನು ರಾಜಕೊಡೆಯನ್ನು ಹಿಡಿದಿದ್ದಾನೆ. ನಾಲ್ಕು ಜನ ದೇವತೆಗಳು ಕಂಟಕನೆಂಬ ಆ ಕುದುರೆಯ ಕಾಲುಗಳನ್ನು ಹಿಡಿದುಕೊಂಡಿದ್ದಾರೆ. ನಾಗಾರ್ಜುನ ಕೊಂಡದ ಮ್ಯೂಜಿಯಂನಲ್ಲಿರುವ ಶಿಲಾಚಿತ್ರವು ಶುದ್ಧೋಧನನು ಹೊರಡಲನುವಾದುದನ್ನೂ, ಯಶೋಧರೆಯು ಮೂರ್ಛೆಯಿಂದ ಬೀಳುವುದನ್ನೂ ಬಹು ಸುಂದರವಾಗಿ ಬುದ್ಧನ ನಿರ್ಗಮನವನ್ನು ಪ್ರದರ್ಶಿಸುತ್ತದೆ.

### ಗುಪ್ತರು

ಗುಪ್ತರ ಸುವರ್ಣಯುಗದ (ಕ್ರಿ.ಶ. ೪ ರಿಂದ ೬ನೇ ಶತಮಾನ) ವಂಶದ ಸ್ಥಾಪಕನಾದ ಶ್ರೀ ಗುಪ್ತನಿಂದ ಪ್ರಾರಂಭವಾಯಿತು. ತನ್ನ ಉಚ್ಛ್ರಾಯ ದೆಶೆಯಲ್ಲಿ ಗುಪ್ತರು ಉಜ್ಜಯಿನಿಯಿಂದ ಒರಿಸ್ಸಾದವರೆಗೆ

ಸಂಪೂರ್ಣ ಗಂಗಾನದಿ ಬಯಲನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡರು. ಇಷ್ಟೊಂದು ವಿಶಾಲವಾದ ಪ್ರದೇಶವನ್ನು ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿಟ್ಟುಕೊಂಡಿದ್ದರಿಂದ ಇವರ ಅವಧಿಯಲ್ಲಿ ಶಿಲ್ಪಕಲೆ, ವಾಸ್ತುಶಿಲ್ಪ ಮತ್ತು ಚಿತ್ರಕಲೆಗಳು ಪ್ರಸಿದ್ಧಿಯ ಶಿಖರವನ್ನು ತಲುಪಿದವು. ಮಥುರಾ ಮತ್ತು ಗಾಂಧಾರಾ ಶೈಲಿಗಳಲ್ಲಿ ಈ ಕಲೆಗಳು ನಿಧಾನವಾಗಿ ಪ್ರಗತಿಯನ್ನು ಕಾಣಲು ಯತ್ನಿಸಿದವು. ಈ ಶಿಲ್ಪ ಕಲೆಯು ಹಲವು ಸಂಪ್ರದಾಯಗಳ ಆಧಾರದ ಮೇಲೆ ಕ್ರಮೇಣವಾಗಿ ಬೆಳವಣಿಗೆ ಕಂಡಿತು.

ನಾಶವನ್ನೇ ಗುರಿಯಾಗಿಟ್ಟುಕೊಂಡು ಮಾಡಿದ ಮುಸ್ಲಿಮರ ದಾಳಿಗಳ ಪರಿಣಾಮದಿಂದಾಗಿ ಗುಪ್ತರ ಕಾಲದ ಕೆಲವು ಕಲಾಕೃತಿಗಳು ಮಾತ್ರ ಉಳಿದುಕೊಂಡವು. ಗುಪ್ತರ ಕಾಲದ ದೇವಾಲಯಗಳು ಅತಿಸ್ವಲ್ಪ ಸಂಖ್ಯೆಯಲ್ಲಿ ಉಳಿದಿದ್ದರೂ, ಅದೃಷ್ಟವಶಾತ್ ಹೆಚ್ಚು



ಸಿದ್ಧಾರ್ಥ, ನಾಗಾರ್ಜುನ ಕೊಂಡ, ಇಕ್ಷ್ವಾಕು

ಸಂಖ್ಯೆಯಲ್ಲಿಯೇ ವಿಗ್ರಹಗಳು ಉಳಿದುಕೊಂಡಿವೆ. ಮಥುರಾ ಮತ್ತು ಸಾರನಾಥಗಳು ಕಲೆಯ ಕೇಂದ್ರಗಳಾಗಿದ್ದವು. ಆದರೂ ಗುಪ್ತರ ಪ್ರಭಾವವು ತುಂಬಾ ಬೇಗನೆ ಬೆಳವಣಿಗೆ ಹೊಂದಿತು. ಪಶ್ಚಿಮ ಘಟ್ಟಗಳ ಗುಹೆಗಳಲ್ಲಿ ನಮಗೆ ದೊರೆಯುವ ಅನೇಕ ಶಿಲಾವಿಗ್ರಹಗಳು ಗುಪ್ತರ ಶೈಲಿಯನ್ನೇ ಹೊಂದಿವೆ. ಈ ಗುಹೆಗಳು ಗುಪ್ತರ ಮಿತ್ರರಾಜರಾದ ವಾಕಾಟಕರಿಂದ ತಯಾರಾಗಿದ್ದರೂ, ಅವುಗಳಲ್ಲಿರುವ ಶಿಲಾ ಮೂರ್ತಿಗಳು ಮಾತ್ರ ಗುಪ್ತರ ಕಲೆಯನ್ನೇ ಹೊಂದಿಕೊಂಡಿವೆ. ಈ ವಿಗ್ರಹಗಳು ಕುಳಿತ ಹಾಗೂ ನಿಂತಿರುವ ಭಂಗಿಗಳಲ್ಲಿವೆ. ಇವು ಬೌದ್ಧ, ಹಿಂದೂ, ಜೈನ ಧರ್ಮಗಳಿಗೆ ಸೇರಿದ್ದಾಗಿವೆ. ಗುಪ್ತರ ಕಾಲದಲ್ಲಿ ಹಿಂದೂಧರ್ಮದ ಪುನಶ್ಚೇತನವಾದರೂ, ಬೌದ್ಧ ಧರ್ಮ ಹಾಗೂ ಜೈನ ಧರ್ಮಗಳೆರಡೂ ಇವರ ಸಾಮ್ರಾಜ್ಯದಲ್ಲಿ ಅಭಿವೃದ್ಧಿ ಹೊಂದಿದವು. ಭಾರತೀಯ ಕಲೆಯು ಎಂದೂ ಯಾವುದೇ ಒಂದೇ ಪಂಥಕ್ಕೆ ಸೇರಿದ್ದಾಗಿರಲಿಲ್ಲ.

ಬುದ್ಧನ ನಿಂತಿರುವ ಭಂಗಿಗಳುಳ್ಳ ವಿಗ್ರಹಗಳು ಈಗಲೂ ನಾವು ಕಲ್ಕತ್ತೆ, ಮಥುರಾ, ನವದೆಹಲಿ ಮತ್ತು ಲಂಡನ್ ವಸ್ತು ಸಂಗ್ರಹಾಲಯಗಳಲ್ಲಿ ನೋಡಬಹುದು. ಮಥುರಾದ ಮಾದರಿಗಳಿಗಿಂತಲೂ ಗುಪ್ತರ ಕಾಲದ ಈ ವಿಗ್ರಹಗಳು ತುಂಬಾ ಸುಧಾರಿತ ಲಕ್ಷಣಗಳನ್ನು ಹೊಂದಿವೆ. ಉದಾಹರಣೆಗೆ ಮೈಮೇಲಿನ ಹೊದಿಕೆಯ ರಚನೆ ತುಂಬಾ ಸೂಕ್ಷ್ಮವಾಗಿ, ನಾಜೂಕಾಗಿ ಕೆತ್ತಲ್ಪಟ್ಟಿದೆ. ಮೊದಲಿನ ಒರಟುತನ ಇವುಗಳಲ್ಲಿಲ್ಲ. ಬಟ್ಟೆಯು ಮೈಗೆ ಪೂರ್ತಿ ಅಂಟಿಕೊಂಡಿದೆಯೋ ಎಂಬಂತೆ ನಯವಾಗಿ ರಚಿಸಲಾಗಿದೆ. ಬಟ್ಟೆಯ ಮಡಿಕೆಗಳು ಸಮಾನಾಂತರ ಗೆರೆಗಳನ್ನು ಹೊಂದಿದ್ದು, ದೂರದಿಂದ ನೋಡಿದಾಗ ನಿಜವಾದ ಬಟ್ಟೆಯೇ ಅಂತಹ ಮಡಿಕೆಗಳೊಂದಿಗೆ ವಿಗ್ರಹದ ಮೇಲಿದೆಯೇನೋ ಎಂಬಂತೆ ಭ್ರಮೆ ಹುಟ್ಟಿಸುವಂತಿದೆ. ಕುಶಾನರ ಕಾಲದ ಬುದ್ಧ ವಿಗ್ರಹಗಳಂತೆಯೇ ಈ ಕಾಲದ ವಿಗ್ರಹಗಳೂ ಸಂಪೂರ್ಣ ಭಾರತೀಯ ಮಾದರಿಯ ಮಾನವ ಶರೀರ ರಚನೆಯನ್ನೇ ಹೊಂದಿವೆ. ಆದರೆ ಹಿಂದಿನ ಒರಟುತನವಿಲ್ಲ. ಈ ಶಿಲಾ ಮೂರ್ತಿಗಳಲ್ಲಿ ವಿಸ್ಮಯಕರ ಗಾಂಭೀರ್ಯ ಎದ್ದು ಕಾಣುತ್ತದೆ. ತಾಂತ್ರಿಕವಾಗಿ ಹಾಗೂ ಸೊಗಸಿನಲ್ಲಿ ಗುಪ್ತರ ಶಿಲ್ಪಕಲೆಯು ಒಳ್ಳೆಯ ಪ್ರಭುತ್ವವನ್ನೇ ಸಾಧಿಸುತ್ತದೆ. ವಿಶೇಷವಾಗಿ ಬುದ್ಧನ ವಿಗ್ರಹಗಳನ್ನು ವಿಮರ್ಶಾ ದೃಷ್ಟಿಯಿಂದ ಅವಲೋಕಿಸಿದಾಗ ಭೌತಿಕ ಮೌಲ್ಯಗಳ ಮೇಲೆ ಮಾನವನು ತನ್ನ ಆಧ್ಯಾತ್ಮಿಕ ಶಕ್ತಿಯ ಪ್ರಭುತ್ವವನ್ನು ಸಾಧಿಸಿರುವುದನ್ನು ಪ್ರದರ್ಶಿಸುತ್ತದೆ. ಈ ಹಿಂದಿನ ಪ್ರತಿಮೆಗಳನ್ನು ನೋಡಿದರೆ ಕೇವಲ ದೈಹಿಕ ಶಕ್ತಿಗೆ ಹಾಗೂ ಶರೀರದ ಘನತ್ವಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದಂತೆ ಕಾಣುತ್ತದೆ. ಆದರೆ ಗುಪ್ತರ ಕಾಲದ ಈ ವಿಗ್ರಹಗಳು ತಮ್ಮ ಕೋಮಲವಾದ ಶರೀರ, ಉತ್ತಮವಾದ ಮೈಕಟ್ಟು, ಮುಖಭಾವದಲ್ಲಿ ವಿಚಾರಶೀಲತೆ ಹಾಗೂ ಪ್ರಸನ್ನತೆಗಳ ಮುಕ್ತ ಪ್ರದರ್ಶನಗಳನ್ನು ತೋರುವುದಲ್ಲದೆ ದೈಹಿಕ ಶರೀರವನ್ನು ಆತ್ಮ ಶಕ್ತಿಯು ಜಯಿಸಿದ ಬಗೆಯನ್ನು ವಿವರಿಸುವಂತೆ ನಮಗೆ ಕಾಣಿಸುತ್ತವೆ. ಪ್ರತಿಮೆಗಳು ಪ್ರಭಾವಳಿಗಳನ್ನು ಹೊಂದಿವೆ. ಪ್ರಭಾವಳಿಗಳ ಸುತ್ತಲೂ ಹೂವಿನ ಅಲಂಕಾರವು ಗುಪ್ತರ ಕಾಲದ ಪ್ರಮುಖ ಅಂಶವೆಂದು ಕಂಡುಬರುತ್ತದೆ. ಗುಪ್ತರ ಕಾಲದ ಕಲಾವಿದರು ಬುದ್ಧನ ಜೀವನ ಅಥವಾ ಜಾತಕ ಕಥೆಗಳನ್ನು ಕುರಿತ ವರ್ಣನಾ ದೃಶ್ಯಾವಳಿಗಳನ್ನು ರಚಿಸುವ ಉತ್ಸಾಹ ಹೊಂದಿದಂತೆ ಕಾಣುವುದಿಲ್ಲ. ಧಾರ್ಮಿಕ ಶ್ರೇಷ್ಠನಾದ ಬುದ್ಧನಿಗೆ ಮಾತ್ರ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಕುಳಿತಿರುವ ಬುದ್ಧನ ಕೆಳಗಿನ ಪೀಠದ ಮುಂದುಗಡೆ ಬುದ್ಧನ ರಾಜ್ಯ ಪರಿತ್ಯಾಗವನ್ನು ಮುಖ್ಯ ದೃಶ್ಯಗಳೊಂದಿಗೆ ಚಿಕ್ಕದಾಗಿ ವಿವರಿಸಲಾಗಿದೆ. ಅಮರಾವತಿಯಲ್ಲಿ ಕುಶಾನರ ಮಾದರಿಯ ಶಿಲ್ಪಗಳಲ್ಲಿ ಕಾಣುವ ಹಾಗೆ ಬುದ್ಧನ ಜೀವನದ ಘಟನಾವಳಿಗಳಿಗೆ ಕೊಟ್ಟಿರುವ ಪ್ರಾಮುಖ್ಯತೆಯನ್ನು ಇಲ್ಲಿ ನೀಡಿರುವುದಿಲ್ಲ. ನಿಂತಿರುವ ಭಂಗಿಯಲ್ಲೇಯಾಗಲೀ, ಕುಳಿತಿರುವ ಭಂಗಿಯಲ್ಲೀಯಾಗಲೀ ಆಕಾರದ ಪ್ರಮಾಣದಲ್ಲಿ ಬುದ್ಧನಿಗೆ ಮಾತ್ರ ಶೇಕಡ ೯೦ರಷ್ಟು ಸ್ಥಾನ ನೀಡಿ, ಉಳಿದ ಸ್ಥಳವನ್ನು ಆತನ ಜೀವನದ ಒಂದೆರಡು ಘಟನೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಚಿತ್ರಗಳು ಶಾಂತ ಮುದ್ರೆಯನ್ನು ಹೊಂದಿದ್ದು, ಸುತ್ತಲಿನ ಜಗತ್ತಿನೊಂದಿಗೆ ಯಾವ ಸಂಬಂಧವೂ ಇಲ್ಲವೆಂಬಂತೆ ಕಾಣಿಸುತ್ತದೆ. ಸಾರನಾಥದ ಮ್ಯೂಜಿಯಂನಲ್ಲಿರುವ ಒಂದು ಶಿಲಾ ಉಬ್ಬು ಚಿತ್ರದಲ್ಲಿ ಬುದ್ಧನ ಜೀವನದ ನಾಲ್ಕು ಮುಖ್ಯ ಘಟನೆಗಳನ್ನು ಚಿತ್ರಿಸಲಾಗಿದೆ. ಹುಟ್ಟು, ಜ್ಞಾನೋದಯ, ಪ್ರಥಮ ಜ್ಞಾನೋಪದೇಶ ಮತ್ತು ನಿರ್ವಾಣ. ಕೆಳಗಿನ ಪ್ಯಾನಲಿನಲ್ಲಿ ಮಾಯೆಯು ಒಂದು ಮರದ ಕೆಳಗೆ ನಿಂತಿರುವಳು. ಆಕೆಯ ಬಲಗಡೆಯಿಂದ ಬುದ್ಧನು ಶಕ್ರನಿಂದ ಪಡೆದಿದ್ದನ್ನು ಕೊಡುತ್ತಿರುವನು. ತುಸು ಎಡಕ್ಕೆ ಬುದ್ಧನು ಒಂದು ಕಮಲದ ಮೇಲೆ ನಿಂತಿರುವನು. ಆತನ ಮೇಲ್ಭಾಗದಲ್ಲಿ ಇಬ್ಬರು ನಾಗರು ಬುದ್ಧನ ಎರಡೂ ಬದಿಗೆ ನಿಂತಿದ್ದು ಧಾರ್ಮಿಕ ವಿಧಿಗಳನ್ನು ನೆರವೇರಿಸುತ್ತಿರುವರು. ಇಷ್ಟೆಲ್ಲಾ ದೃಶ್ಯಗಳನ್ನು ಒಂದರ ಬದಿಗೆ ಮತ್ತೊಂದನ್ನು ತೋರಿಸಿದ್ದರೂ ಫಲಕದಲ್ಲಿ ಜನ ಸಂದಣಿಯ ಯಾವುದೇ ರೀತಿಯ ಒತ್ತಡ ಕಂಡುಬರುವುದಿಲ್ಲ. ಅಂಕಣ ಫಲಕದ ಈ ಚಿತ್ರದಲ್ಲಿ ತುಸು ಮೇಲ್ಭಾಗದಲ್ಲಿ ಮಾರ ಮತ್ತು ಆತನ ಕುವರಿಯವರು ಬುದ್ಧನನ್ನು ಆತನ ನಿರ್ವಾಣದ ಮುಂಚೆ ಮರುಳುಗೊಳಿಸುವ ಯತ್ನದಲ್ಲಿದ್ದಾರೆ. ಆದರೆ ಬುದ್ಧನು ಮಾತ್ರ ಪದ್ಮಾಸನದಲ್ಲಿ ತನ್ನ ಬಲಗೈಯಿಂದ ಭೂಮಿಯನ್ನು ಸ್ಪರ್ಶಿಸುತ್ತಿರುವ ಭಂಗಿಯಲ್ಲಿ ಕುಳಿತು ಆಳವಾದ ಧ್ಯಾನದಲ್ಲಿ ಮುಳುಗಿದ್ದಾನೆ. ಮೂರನೆಯ ಅಂಕಣ ಫಲಕದಲ್ಲಿ ಬುದ್ಧನು ತನ್ನ ಮೊದಲನೆಯ ಬೋಧನೆಯನ್ನು ಮಾಡುತ್ತಿರುವನು. ಆತನ ಆಸನದ ಕೆಳಗೆ ಧರ್ಮ ಚಕ್ರವಿದ್ದು ಅದರ ಎರಡೂ ಬದಿಗೆ ಅನುಯಾಯಿಗಳು ನಿಂತಿರುವರು. ನಾಲ್ಕನೆಯ ಅಂಕಣ ಫಲಕವು ಆತನ ಮುಕ್ತಿಯನ್ನು ತೋರಿಸುತ್ತದೆ. ಸಾರನಾಥದ ಮ್ಯೂಜಿಯಂನಲ್ಲಿರುವ ಮತ್ತೊಂದು ಸ್ಮಾರಕ ಸ್ತಂಭವು ಬುದ್ಧನ ಜೀವನದ ಎಂಟು ದೃಶ್ಯಗಳನ್ನು ಪ್ರದರ್ಶಿಸುತ್ತದೆ. ಮುಖ್ಯ ಘಟನೆಗಳು ಮೇಲಿನ ವಿವರಣೆಯ ಹಾಗೆಯೇ ಇದ್ದು ಹಾಸುಗಲ್ಲಿನ ನಾಲ್ಕು ದೃಶ್ಯಗಳು ಎರಡು ಸಾಲುಗಳಲ್ಲಿವೆ.

ಮಂಗವೊಂದು ಬುದ್ಧನಿಗೆ ಮಧುವನ್ನು ಕೊಡುತ್ತಿರುವುದು. ನಲಗಿರಿ ಎಂಬ ಮದ್ದಾನೆಯನ್ನು ಬುದ್ಧನು ಸಾಧುಗೊಳಿಸುತ್ತಿರುವುದು. 'ತುಷಿತ' ಸ್ವರ್ಗದಿಂದ ಆತನು ಕೆಳಗೆ ಬರುತ್ತಿರುವುದು ಮತ್ತು ಶ್ರಾವಸ್ತಿಯ ಅದ್ಭುತದಲ್ಲಿ ಆತನ ರೂಪ ಸಾವಿರಪಟ್ಟು ವೃದ್ಧಿಗೊಳ್ಳುತ್ತಿರುವುದು. ಈ ನಾಲ್ಕು ದೃಶ್ಯಗಳಲ್ಲಿಯೂ ಜೀವಂತ ಕಳೆಯನ್ನು ಕಾಣುತ್ತೇವೆ.

ಗುಪ್ತರ ಕಾಲದ ಒಂದೇ ಒಂದು ತಾಮ್ರಲೋಹದ ಶಿಲ್ಪ ಮಾತ್ರ ನಮಗೆ ದೊರೆತಿದೆ. ಅದು ಈಗ ಬರ್ಮಿಂಗ್ ಹ್ಯಾಂ ಮ್ಯೂಜಿಯಂನಲ್ಲಿದೆ. ಬುದ್ಧನ ಶಿಲ್ಪ ದೊಡ್ಡ ತಾಮ್ರದಲ್ಲಿ ತಯಾರಿಸಲಾಗಿದ್ದು, ಇದು ಸುಲ್ತಾನ್ ಗಂಜ್‌ನಲ್ಲಿ ಸಿಕ್ಕಿದೆ. ಐದನೆಯ ಶತಮಾನದಲ್ಲಿಯ ಮಥುರಾದ ಶಿಲ್ಪಾಕೃತಿಗಳ ಹಾಗೆಯೇ ದೇಹವು ತೆಳುವಾಗಿ, ಕೈಕಾಲುಗಳು ಕೊಳವೆಯಾಕಾರದಲ್ಲಿ ಮೃದುವಾಗಿ ಕಾಣುತ್ತವೆ. ಮೇಲು ಹೊದಿಕೆ ಪಾರದರ್ಶಕವಾಗಿದ್ದು ಅದರ ಮಡಿಕೆಗಳು ವೃತ್ತಾಕಾರದಲ್ಲಿ ಎಳೆಯಲ್ಪಟ್ಟ ಗೆರೆಗಳ ಹಾಗೆ ಕಾಣಿಸುತ್ತವೆ. ದೊಡ್ಡದಾದ ಮೇಲು ಹೊದಿಕೆಯ ಹೆಚ್ಚು ಭಾಗ ಹಿಂದುಗಡೆ ನೇತಾಡುತ್ತಾ ನೆಲವನ್ನು ಮುಟ್ಟುತ್ತಿರುವಂತೆ ಕಾಣಿಸುತ್ತಿದ್ದು ಚಿತ್ರದಲ್ಲಿರುವ ವ್ಯಕ್ತಿಯ ಘನತೆಯನ್ನು ಸಾರುವ ಹಾಗೆ ತೋರುತ್ತದೆ. ಬುದ್ಧನ ನಿಂತಿರುವ ಭಂಗಿ,ಶಾಂತಮುಖ ಮುದ್ರೆ, ಹರಸುತ್ತಿರುವ ಬಲಗೈ ಮತ್ತು ತುಸು ಎತ್ತಿರುವ ಎಡಗೈ - ಎಲ್ಲವೂ ಮಹಾತ್ಮನ ವೈಶಿಷ್ಟ್ಯತೆಯನ್ನು ಪ್ರದರ್ಶಿಸುತ್ತವೆ. ಹಿಂದೂ ವಿಗ್ರಹಗಳು ಬುದ್ಧನ ಚಿತ್ರಗಳನ್ನೇ ಹೋಲುತ್ತವೆ. ಬೋಸ್ಟ್‌ನ ಮ್ಯೂಜಿಯಂ ಆಫ್ ಫೈನ್ ಆರ್ಟ್ಸ್‌ನಲ್ಲಿ 'ವೈಕುಂಠ ವಿಷ್ಣು' ಎಂಬ ಲಂಕಣವನ್ನು ನೋಡಿದಾಗ ಈ ವಿಷಯವು ಗೊತ್ತಾಗುತ್ತದೆ. ನಯವಾದ ದೇಹ, ಬುದ್ಧನ ಹಾಗೆಯೇ ಬಲಿಷ್ಠವಾದ ಸ್ನಾಯುಗಳನ್ನು ಹೊಂದಿದೆ. ಬಲಬದಿಯ ನರಸಿಂಹ ಮುಖ ಮತ್ತು ಎಡಬದಿಯ ವರಾಹ ಮುಖಗಳನ್ನು ಮುಚ್ಚಿದರೆ ಬರಿಮೈಗೆ ಹೊಂದುವುದಿಲ್ಲ. ಕರ್ಣಕುಂಡಲಗಳು, ಒಂದೇ ಕಂಠಾಭರಣ, ಕೈಗಳ ಕಂಕಣ, ಯಜ್ಞೋಪವೀತ, ಹೂವಿನ ಕೊಕ್ಕೆ ಮತ್ತು ಹರಿದ ಪುಷ್ಪ ಮಾಲೆ - ಇವು ಮಾತ್ರ ಮೈಮೇಲೆ ಕಾಣಿಸುತ್ತವೆ.

ಮಥುರಾದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಇರುವ ವಿಷ್ಣು ಶಿಲ್ಪವನ್ನು ಗುಪ್ತರ ಕಾಲದ ಬ್ರಾಹ್ಮಣಶಿಲ್ಪ ಶೈಲಿಯ ಒಂದು ಉತ್ತಮ ಉದಾಹರಣೆಯೆಂದೇ ಹೇಳಬಹುದು. ಇದು ವಿಷ್ಣುವಿನ ಮೂರ್ತಿಯಂತೆ ಕಂಡುಬಂದರೂ, ಕೆಲವಿದ್ವಾಂಸರು ಇದನ್ನು ಬೋಧಿಸತ್ವನ ವಿಗ್ರಹವೆಂದು ಅಭಿಪ್ರಾಯ ಪಡುತ್ತಾರೆ. ಈ ಪ್ರತಿಮೆ ನಿಂತಿರುವ ಭಂಗಿಯಲ್ಲಿದ್ದು ಕೆಂಪು ಮರಳು ಕಲ್ಲಿನಿಂದ ನಿರ್ಮಿತವಾಗಿದೆ. ಕಾಲುಗಳು ಮತ್ತು ಮುಂಗೈ ನಾಶವಾಗಿದೆ. ಶರೀರದ ಮೇಲ್ಭಾಗವು ನಿರ್ಮಾಣವಾಗಿದ್ದು, ಕೆಳಗಿನ ಭಾಗವು ತುಂಡು ಬಟ್ಟೆಯಿಂದ ಸುತ್ತಲ್ಪಟ್ಟು ಒಂದು ದಾರದಿಂದ ಕಟ್ಟಲ್ಪಟ್ಟಿದೆ. ತಲೆಯ ಮೇಲೆ ಮಣಿ ಮುಕುಟವಿದೆ. ಭುಜ ಮತ್ತು ಮೊಣಕೈಗಳ ಮೂಲಕ ಹೂವಿನ ಸರ (ವನಮಾಲೆ) ಹಾಯ್ದಿದೆ. ಕಂಠಾಭರಣಗಳು, ಕಡಗಗಳು, ಕಿವಿಯ ಆಭರಣಗಳು, ಎಡಬದಿಯಲ್ಲಿ ನೇತಾಡುವ ಯಜ್ಞೋಪವೀತ ಮತ್ತು ಶಿರದ ಹಿಂದುಗಡೆ ಕಾಣುವ ಪ್ರಭಾವಳಿ ಮುಂತಾದವುಗಳನ್ನು ತುಂಬಾ ಸುಂದರವಾಗಿ ಸೂಕ್ಷ್ಮ ವಿವರಗಳೊಂದಿಗೆ ಖಂಡಿಸಲಾಗಿದೆ.

ಗ್ವಾಲಿಯರ್‌ನಲ್ಲಿರುವ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಗುಪ್ತರ ಶೈಲಿಯ ಅತ್ಯುತ್ತಮ ಮಾದರಿಗಳಾದ ಗಂಧರ್ವ ಮತ್ತು ಅಪ್ಸರ ಉಬ್ಬು ಶಿಲ್ಪ ಚಿತ್ರಗಳನ್ನು ಕಾಣುತ್ತೇವೆ. ಇಲ್ಲಿ ಮಾನವಾಕೃತಿಯ ಚಿತ್ರಗಳು ಗಗನದಲ್ಲಿ ಹಾರುತ್ತಿರುವ ಹಾಗೆ ತೋರಿಸಲಾಗಿದೆ. ಕಾಲುಗಳು ಗಾಳಿಯಲ್ಲಿ ತೇಲಾಡುತ್ತಿವೆಯೇನೋ ಎಂಬಂತೆ ಸುಂದರವಾಗಿ ರೂಪಿಸಲಾಗಿದೆ. ಈ ಶಿಲಾಮೂರ್ತಿಗಳ ತಲೆಗಳಿಗೆ ವಿವಿಧ ಆಭರಣಗಳಿಂದ ಅಲಂಕೃತಗೊಳಿಸಿ ಭಾರವಾಗಿ ತೋರಿಸಲಾಗಿದೆ. ಆದರೂ ಉಳಿದ ಶರೀರದ ಭಾಗಗಳು ಮಾತ್ರ ತುಂಬ ಹಗುರವಾಗಿ ಗಾಳಿಯಲ್ಲಿ ತೇಲುವ ಹಾಗೆ ಚಿತ್ರಿತವಾಗಿದೆ. ಪಾದಗಳು ಮೆಟ್ಟಿಲುಗಳನ್ನು ತೆಳುವಾಗಿ ಸ್ಪರ್ಶಿಸಿ ಗಾಳಿಯಲ್ಲಿ ತೇಲಾಡುವಂತೆ ಭಾಸವಾಗುತ್ತದೆ.

ಗುಪ್ತರ ನಂತರವೂ ಕೂಡ ಮೇಲೆ ಹೇಳಿದ ಗುಪ್ತರ ಶೈಲಿಯು ಭೌಗೋಲಿಕವಾಗಿಯೂ ಮತ್ತು ಕಾಲಾನುಕ್ರಮದಲ್ಲಿಯೇ ತುಂಬಾ ವೇಗದಿಂದ ಹಬ್ಬಿತ್ತು. ದೇವಗಡದಲ್ಲಿರುವ ದಶಾವತಾರದ ದೇವಸ್ಥಾನವು ಗುಪ್ತರ ನಂತರದ ಶಿಲ್ಪಗಳಲ್ಲಿ ಉತ್ತಮವೆಂದು ಹೇಳಬಹುದು, ಏಕೆಂದರೆ ಈ ವಿಗ್ರಹಗಳಲ್ಲಿ ಸೌಂದರ್ಯ ಹಾಗೂ ಪರಿಣತೆಯನ್ನು ಕಾಣುತ್ತೇವೆ. ವಿಮಾನದ ಮೂರು ಕಡೆ ಅಂಕಣ ಚಿತ್ರಗಳಿವೆ. ಒಂದು ಅಂಕಣದಲ್ಲಿ ವಿಷ್ಣು ಅನಂತಶಯನನಾಗಿ ಭೂದೇವಿಯ ತೊಡೆಯ ಮೇಲೆ ತನ್ನ ಕಾಲನ್ನು ವಿಶ್ರಮಿಸುವಂತೆ ಮಲಗಿದ್ದಾನೆ. ಭೂದೇವಿಯು ತನ್ನ ಎರಡೂ ಕೈಗಳಿಂದ ಆತನ ಕಾಲುಗಳನ್ನು ಹಿಡಿದಿದ್ದಾಳೆ. ಆಕೆಯ ಸುತ್ತಲೂ ಆಯುಧ ಪುರುಷರು ಗದೆ, ಬಿಲ್ಲುಗಳನ್ನು ಹಿಡಿದಿದ್ದಾರೆ. ವಿಷ್ಣುವಿನ ಮೇಲ್ಗಡೆ ಆತನ ನಾಭಿಯಿಂದ ಉದ್ಭವವಾಗಿರುವ ಕಮಲದಲ್ಲಿ ಮೂರು ಮುಖದ ಬ್ರಹ್ಮ ಕುಳಿತಿದ್ದಾನೆ. ಬ್ರಹ್ಮನು ತನ್ನ ಎಡಗೈಯಲ್ಲಿ ಕಮಂಡಲವನ್ನು ಹಿಡಿದಿದ್ದು ಬಲಗೈಯನ್ನು ಚಿನ್ಮುದ್ರೆಯಲ್ಲಿರುವಂತೆ ತೋರಿಸಿದೆ. ಜಿಂಕೆಯ ಚರ್ಮವನ್ನು ಉಪವೀತದ ರೀತಿಯಲ್ಲಿ ಚಿತ್ರಿಸಿದೆ. ಇತರ ದೇವತೆಗಳಾದ ಇಂದ್ರ, ಕಾರ್ತಿಕೇಯ, ಶಿವ ಮತ್ತು ಪಾರ್ವತಿಯರು ಮೇಲೆ ಕಾಣುತ್ತಾರೆ. ಕೆಳಗಡೆ ಬಲಗಡೆಯ ತುದಿಯಲ್ಲಿ ಲಕ್ಷ್ಮಿ ನಿಂತಿದ್ದಾಳೆ. ಸಂಪೂರ್ಣ ಎಡಬದಿಯಲ್ಲಿ ಶಂಖ, ಚಕ್ರ ಖಡ್ಗಗಳನ್ನು ತೋರಿಸಲಾಗಿದೆ. ಈ ಕೊನೆಯ ಆಯುಧಗಳ ಪ್ರದರ್ಶನವು ಮಧು ಮತ್ತು ಕೈಟಭ ರಾಕ್ಷಸರನ್ನು ಸಂಹರಿಸುವ ಸನ್ನಾಹದಲ್ಲಿರುವಂತೆ ಚಿತ್ರಿಸಲಾಗಿದೆ.

ಎರಡನೆಯ ಅಂಕಣದಲ್ಲಿ ಹಿಮಾಲಯದಲ್ಲಿ ಅರ್ಜುನ ಮತ್ತು ಕೃಷ್ಣರ ತಪೋಭಂಗಿಗಳನ್ನು ನರನಾರಾಯಣರ ಆಕೃತಿಗಳಲ್ಲಿ ಚಿತ್ರಿಸಲಾಗಿದೆ. ಈರ್ವರು ಬದರಿ ವೃಕ್ಷದ ಕೆಳಗಡೆ ಜಟಾಮಕುಟ ಧಾರಿಗಳಾಗಿ ಲಲಿತಾಸನದಲ್ಲಿ ಕುಳಿತಿದ್ದಾರೆ. ತನ್ನ ನಾಲ್ಕು ಕೈಗಳಲ್ಲಿ ಒಂದರಲ್ಲಿ ಜಪಮಣಿಸರವನ್ನು ಹಿಡಿದಿದ್ದಾನೆ. ಮತ್ತೊಂದು ಕೈ ಚಿನ್ಮುದ್ರೆಯಲ್ಲಿದೆ ಕೆಳಗಿನ ಎಡಗೈನಲ್ಲಿ ಕಮಂಡಲವನ್ನು ಹಿಡಿದಿದ್ದಾನೆ. ಆತನು ಪಾರದರ್ಶಕ ಉಡುಪನ್ನು ಧರಿಸಿದ್ದು ಶರೀರದ ಉಬ್ಬು ತಗ್ಗುಗಳು ಸ್ಫುಟವಾಗಿ ಗೋಚರಿಸುತ್ತದೆ. ಮೇಲ್ಗಡೆ ಕಮಲದಲ್ಲಿ ಬ್ರಹ್ಮನು ಕುಳಿತಿದ್ದಾನೆ. ಸುತ್ತಲೂ ಅಪ್ಸರೆಯರನ್ನು ಹಾರುವ ಭಂಗಿಯಲ್ಲಿ ಚಿತ್ರಿಸಲಾಗಿದೆ. ನರನಾರಾಯಣರ ಇಕ್ಕೆಲಗಳಲ್ಲಿ ಜಿಂಕೆ ಮತ್ತು ಸಿಂಹಗಳು ಇವರನ್ನು ನೋಡುತ್ತಾ ನಿಂತಿವೆ. ಮೂರನೇ ಅಂಕಣದಲ್ಲಿ ಗಜೇಂದ್ರ ಮೋಕ್ಷ ಸಂದರ್ಭವನ್ನು ಬಹಳ ಸುಂದರವಾಗಿ ಕೆತ್ತಲಾಗಿದೆ. ಗಂಗಾ ಮತ್ತು ಯಮುನೆಯರು ಆಶ್ಚರ್ಯಚಕಿತರಾಗಿ ನೋಡುತ್ತಿದ್ದಾರೆ.

ಈ ಗುಪ್ತರ ಕಲಾ ಶೈಲಿಯೂ ಅಜಂತಾ ಗುಹೆಗಳಲ್ಲಿಯೂ ಕಾಣಸಿಗುತ್ತದೆ. ಭೂಪಾಲಿನ ಕಾರ್ಲೆ ಮತ್ತು ಉದಯಗಿರಿ ಗುಹೆಗಳಲ್ಲಿರುವ ಶಿಲ್ಪಗಳು ಇದೇ ಶೈಲಿಯಲ್ಲಿವೆ. ಬುದ್ಧನನ್ನು ವರಮುದ್ರೆಯಲ್ಲಿ ಚಿತ್ರಿಸಲಾಗಿದೆ ಒಬ್ಬ ಭಕ್ತನು ಆತನ ಪಾದಗಳ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿದ್ದಾನೆ. ಅಜಂತಾದ ೧೯ನೇ ಗುಹೆಯಲ್ಲಿ ಎಡಬದಿಯ ಗೋಡೆಯಲ್ಲಿ ಅತ್ಯುತ್ತಮವಾದ ಶಿಲ್ಪ ಕಲಾಕೃತಿಗಳನ್ನು ಕಾಣುತ್ತೇವೆ. ಅವುಗಳಲ್ಲಿ ನಾಗರಾಜ ಮತ್ತು ಆತನ ರಾಣಿಯು ಕುಳಿತಿರುವ ಹಾಗೆ ಒಂದು ಚೌಕಟ್ಟಿನಲ್ಲಿ ಚಿತ್ರಿಸಿರುವುದು ಒಂದು ಉತ್ತಮ ಉದಾಹರಣೆಯಾಗಿದೆ. ಉದಯಗಿರಿಯ ಗುಹೆಗಳಲ್ಲಿ ವಿಷ್ಣುವಿನ ಅವತಾರವಾದ ವರಾಹನಿಗೆ ಪ್ರಾಶಸ್ತ್ಯ ನೀಡಲಾಗಿದೆ. ಇಲ್ಲಿ ವರಾಹನು ತನ್ನ ಕೋರೆಗಳಿಂದ ಹಿರಣ್ಯಾಕ್ಷನ ಬಂಧನದಿಂದ ಪೃಥ್ವಿಯನ್ನು ರಕ್ಷಿಸುವಂತೆ ಚಿತ್ರಿಸಲಾಗಿದೆ. ಈ ಶೈಲಿಯು ಅಜಂತ ಮತ್ತು ಕಾರ್ಲೆಗಳ ಶಿಲ್ಪಗಳನ್ನು ಹೆಚ್ಚಾಗಿ ಹೋಲುತ್ತವೆ.

ಗುಪ್ತರ ನಂತರ ವರ್ಧನರು ಅಧಿಕಾರಕ್ಕೆ ಬರುತ್ತಾರೆ. ಈ ವಂಶದಲ್ಲಿ ಥಾನೇಶ್ವರದ ಹರ್ಷವರ್ಧನನು ಮಾತ್ರ ಪ್ರಮುಖ. ಚೀನಾದ ಹುಯೆಂತ್ಸಾಂಗನು ಮತ್ತು ಸಂಸ್ಕೃತ ಕವಿ ಬಾಣನು ಶಿಲ್ಪಕಲೆಗೆ ಈ ರಾಜನು ಬಹಳ ಪ್ರೋತ್ಸಾಹ ನೀಡಿದನೆಂದು ಉಲ್ಲೇಖಿಸುತ್ತಾರೆ. ಈ ಕಾಲದ ಶೈಲಿಯಲ್ಲಿ ಗುಪ್ತರ ಶೈಲಿಯನ್ನೇ ಮುಂದುವರೆಸಲಾಗಿದೆ. ಉದಾಹರಣೆಗೆ ನವದೆಹಲಿಯಲ್ಲಿ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿರುವ ಮಹಿಳೆಯ

(ಪುಟ 13ಕ್ಕೆ)

# ಧನಿಯರ ಸತ್ಯನಾರಾಯಣ

✍ ಕೊರಡ್ಕಲ್ ಶ್ರೀನಿವಾಸರಾವ್

ಆರು ವರ್ಷದ ಹುಡುಗ, ಕಲ್ಲು ಮುಳ್ಳಿನ ಏರುತಗ್ಗಿನ ಊರ ಕವಲು ದಾರಿ ನಡೆದು ಸೋತಿದ್ದಾನೆ. ಆತನ ತಲೆಯ ಮೇಲೊಂದು ಬಾಳೆಯ ಕಂದು - ಹೊರಲಾರದ ಹೊರೆಯದು ಅವನಿಗೆ. ಹೊತ್ತು ಕುತ್ತಿಗೆ ಸೋತಾಗ ಅದನ್ನು ಬಲ ಹೆಗಲ ಮೇಲೇರಿಸುವನು. ಅನಂತರ ಎಡ ಹೆಗಲ ಮೇಲೆ. ಅಲ್ಲಿಯೂ ನೋವಾದಾಗ ಬಲ ಕುಂಕುಳಲ್ಲಿಟ್ಟು ಕೈಗಳಿಂದಾ ಧರಿಸಿ ಹಿಡಿದುಕೊಳ್ಳುವನು. ಬಳಿಕ ಅದು ಎಡ ಕಂಕುಳಿಗೆ ಹೋಗುವುದು. ಅಲ್ಲಿಂದ ತಿರುಗಿ ತಲೆಯ ಮೇಲೆ. ಹೀಗೆ ಬಡವನಿಗೆ ಹಣದ ಚೀಲಿಗೆ ಸಿಕ್ಕಿದರೆ ಹೇಗೋ ಛಲದಿಂದ ಹೊತ್ತು ಮನೆಯ ಕಡೆ ಸಾಗುವಂತೆ, ಆ ಆರು ವರುಷದ ಬಳಕೆಯೂ ತೋರದ ಹರಕಂಗಿಯ ಕೌಪೀನದ ಬಾಲಕನು ಬಾಳೆಯ ಕಂದನ್ನು ಹೊತ್ತು ಕಾಲೆಳೆದು ಮುಂದೆ ಸಾಗುತ್ತಿದ್ದಾನೆ. ಮನೆ ಹಾದಿ ಹಿಡಿದು. ಇನ್ನೂ ಎರಡು ಮೂರು ಗಳಿಗೆ ನಡೆಯಬೇಕು. ಆದರೆ ಈಗಾಗಲೇ ತೀರ ದಣಿದು ಸುಣ್ಣವಾಗಿದ್ದಾನೆ. ಹಣೆ, ಕುತ್ತಿಗೆ, ಎದೆಯೆಲ್ಲ ಬೆವರು. ಮೋರೆ ಕೆಂಪೇರಿ ಕನಲಿದೆ. ಆದರೂ ಆ ಬಾಳೆಯ ಕಂದನ್ನು ತೆಗೆದತ್ತ ಬಿಸುಡಲಾರ. ಮಾತ್ರವಲ್ಲ, ಬಿಗುವಾಗಿ ಹಿಡಿದರೆ ಅದೆಲ್ಲಿ ಜಜ್ಜಿ ಹೋಗುವುದೋ, ಸಡಿಲವಾಗಿ ಕೈಗೊಟ್ಟರೆ ಅದೆಲ್ಲಿ ಜಾರಿಬಿದ್ದು ಸುಳಿ ಮುರಿದು ನುಜ್ಜು ಗುಜ್ಜಾಗುವುದೋ ಎಂದು ಬೆದರಿ ಬಹು ಜಾಗರೂಕತೆಯಿಂದ ಹೊರುತ್ತಿದ್ದಾನೆ ಅದನ್ನು. ಹೆತ್ತಬ್ಬೆ ತನ್ನ ಮಗುವನ್ನು ಅಷ್ಟು ಜತನದಿಂದ ಹಿಡಿದುಕೊಳ್ಳುವಳೋ ಎಂದು ಸಂಶಯ ಬರಬೇಕು ನೋಡುವವರಿಗೆ.

''ಹೀಗೆ ಹಿಂದೆ ಬಿದ್ದರೆ ಹೇಗೆ ಮನೆ ಸೇರುವುದು? ಹೊತ್ತು ಇಳಿಯುವುದೂ ಕಾಣುವುದಿಲ್ಲವೆ? ಬೇಡಾ ಬೇಡಾ ಎಂದರೆ ಕೇಳದೆ ಹೊತ್ತೆ ! ಯಾವ ಕರ್ಮಕ್ಕೆ ಅದು! ತೆಗೆದತ್ತ ಒಗೆದು, ಬೇಗ ಮುಂದೆ ಬಂದೀ, ಆಯಿತು ! ಇಲ್ಲವಾದರೆ ನಾನೇ ಎಳೆದು ಬಿಸಾಡುತ್ತೇನೆ, ನೋಡು!'' ಎಂದು ಗದರಿಸುತ್ತಾಳೆ ಮುಂದೆ ಸಾಗುತ್ತಿರುವ ಅವನ ತಾಯಿ. ಅವಳಾದರೂ ಆ ಕಂದನ್ನು ತೆಗೆದುಕೊಳ್ಳಬಾರದೇ ಎಂದರೆ ಅವಳಿಗೊಂದು ಹೊರೆ ಬೇರೆಯೇ ಇದೆ, ಸುಮಾರು ಮೂರು ವರುಷದ ಮಗು! ಬಡ ತೌರಿಗೆ ಸೋಣೇ ತಿಂಗಳ ಬಿದ್ದಿಗೆ ಹೋಗಿ, ಹೊಕ್ಕ ಬಡಮನೆಗೆ ಹಿಂತಿರುಗಿ ಬರುತ್ತಿರುವವಳು ಅವಳು. ಅವಳ ತಾಯಿ ಕೊಟ್ಟ ನಾಲ್ಕು ಹಳೆಯ ಸೌತೆಯ ಕಾಯಿ, ಒಂದರೆ ಸೇರು ಅವಡೆ, ಒಂದು ತುಂಡು ಮರಸಣಿಗೆ, ಹರುವೆಯ ದಡಿ, ಕೆಸುವಿನ ಕಾಲು ಇತ್ಯಾದಿಗಳ ಒಂದು ಕಟ್ಟು ಬಲಗೈ ತುದಿಯಿಂದ ತೂಗಿ ಕೈ ತುಂಡಾಗುವಂತಾಗಿದೆ. ಎಡ ಕಂಕಳಲ್ಲಿದೆ ಆ ಮಗು - ನಡೆಯಲಿಕ್ಕೆ ಸಣ್ಣದು, ಹೊರಲಿಕ್ಕೆ ದೊಡ್ಡದು!

ತಾಯಿಯ ಗದರಿಕೆಯನ್ನು ಕೇಳಿ ಅವಳೆಲ್ಲಾದರೂ ಆ ಕಂದನ್ನು ಎಳೆದು ಬಿಸಾಡುವಳೋ ಎಂದು ಅವಳ ಹಿಂದೆಯೇ ಓಡಿಯೋಡಿ ನಡೆಯುತ್ತಿದ್ದ ನಾಲ್ಕು ವರ್ಷದ, ಹರಕು ಪಾವಡೆಯ, ಕಾಡಿಗೆಗಣ್ಣಿನ ಹುಡುಗಿಯೊಂದು ಅಣ್ಣನ ಕೈಯಿಂದ ಅದನ್ನು ತೆಗೆದುಕೊಂಡು ಅವನು ಮಾಡಿದಂತೆ ತಲೆ, ಹೆಗಲು ಕೈ ಕಂಕುಳಗಳನ್ನೆಲ್ಲ ಉಪಯೋಗಿಸಿ ಹೆಣಗಾಡಿ ಅಂತೂ ಸ್ವಲ್ಪ ದೂರ ತಂದಿತು. ಅಷ್ಟರಲ್ಲಿ ತುಸು ಸುಧಾರಿಸಿಕೊಂಡ ಅಣ್ಣನು ತಿರುಗಿ ತಲೆಗೊಟ್ಟ ಆ ಕಂದಿಗೆ. ಹೀಗೆ ಅಣ್ಣ ಸೋತಾಗ ತಂಗಿ, ತಂಗಿ ಸೋತಾಗ ಅಣ್ಣ ಎಂದು ಹಾಗೂ ಹೀಗೂ ಆ ಕಂದು ಬಂದಿಳಿಯಿತು ಅವರ ಗುಡಿಸಲು ಬಾಗಿಲಲ್ಲಿ.

ಅದೊಂದು ರಸಬಾಳೆಯ ಕಂದು. ಆವರಜ್ಜಿಯ ಮನೆಯಲ್ಲಿ ರಸಬಾಳೆಯ ಚಿಕ್ಕದೊಂದು ಗೊನೆ ಬಲಿದಿತ್ತು. ಮೊಮ್ಮಕ್ಕಳು ಬರುವಾಗ ಹಣ್ಣಾಗಲೆಂದು ಆ ಮುದುಕಿ ಅದನ್ನು ಕಡಿಸಿ ತೂಗಿಸಿದಳು. ಆದರೆ ಇವರು ಅಜ್ಜಿಯ ಮನೆ ಸೇರುವುದಕ್ಕೆ ಎರಡು ದಿನ ಮುಂಚಿತವಾಗಿಯೇ ಅದು ಚೆನ್ನಾಗಿ ಮಾಗಿತ್ತು. ರಸಬಾಳೆಯ ಹಣ್ಣಲ್ಲವೇ? ಮಾಗಿದ ಮೇಲೆ ಗೊನೆಯಲ್ಲಿ ನಿಲ್ಲಲಿಲ್ಲ; ಮಗನ ಮಕ್ಕಳ ಕಣ್ಣು ತಪ್ಪಿಸಿ ಈ ಮೊಮ್ಮಕ್ಕಳಿಗೆ ಕೊಟ್ಟಳು. ಊರ ಜಾತ್ರೆಯಲ್ಲಿ ಅಂಗಡಿಯೆದುರು ತೂಗಿಸಿದ್ದ ಬಾಳೆಯ ಗೊನೆಗಳನ್ನು ಈ ಮಕ್ಕಳು ಕಂಡಿದ್ದರಲ್ಲದೆ ತಿಂದು ನೋಡಿದವರಲ್ಲ. ಜಾತ್ರೆಗೆ ಹೋದಲ್ಲಿ ಒಂದೆರಡು ಮಂಡಕ್ಕಿಯುಂಡೆ ಚಕ್ಕುಲಿಗಳಿಗಿಂತ ಹೆಚ್ಚಿನದೇನನ್ನೂ ಕೊಂಡುಕೊಡಲಾರದಷ್ಟು ಕಡುಬಡತನ ಆ ಮಕ್ಕಳ ತಂದೆ ತೌಡನಿಗೆ. ಆದುದರಿಂದ ಹಣ್ಣು ಹಣ್ಣಾದ ಆ ಬಾಳೆಯ ಹಣ್ಣು ಅಮೃತಪ್ರಾಶನದಂತಾಯಿತು ಅವರಿಗೆ. ಅಜ್ಜಿಯ ಬಳಿ ಕುಳಿತು ಅದರ ಕತೆ ಕೇಳಿದರು. ಅಜ್ಜಿಯು ಹೇಳಿದಳು. ಆ ಉದ್ದದ ಕತೆಯನ್ನು ಗಿಡ್ಡಾಗಿ ಹೇಳುವುದಾದರೆ - ಒಂದು ವರುಷದ ಹಿಂದೆ ಅವರ ಮಾವನೊಂದು ರಸಬಾಳೆಯ ಕಂದನ್ನು ತಂದು ನೆಟ್ಟಿದ್ದ. ಅದು ಗೊನೆ ಹಾಕಿತ್ತು. ಆದರೆ ಆ ಗೊನೆ ಬೇಗ ಹಣ್ಣಾಯಿತು. ಇವರು ಬಂದುದು ತಡವಾಯಿತು. ಈಗ ಆ ಬಾಳೆಯ ನಾಲ್ಕು ಕಂದುಗಳಿವೆ. ಅವೂ ಬೆಳೆದು ಗೊನೆ ಹಾಕುವವು. ಆಗ ಒಂದು ಗೊನೆಯನ್ನೇ ಅವರಿಗೆ ಅವಳು ಕಳುಹಿಸಿ ಕೊಡುವಳು... ಅದನ್ನು ಕೇಳಿದ ಆ ಮಕ್ಕಳಲ್ಲಿ ಒಂದು ಯೋಚನೆ ಮಿಂಚಿತು... ತಾವೂ ಅಲ್ಲಿಂದ ಒಂದು ಕಂದನ್ನು ಕೊಂಡು ಹೋಗಿ ತಮ್ಮ ಮನೆಯೆದುರು ಮೋರೆ ತೊಳೆವಲ್ಲಿ ನೆಟ್ಟರಾಗದ? - ಎಂದು. ಎರಡು ಮೂರು ದಿನ ಅದೇ ಹಂಬಲ ಅವರಿಗೆ. ಕೊನೆಗೆ ಮಾವನು ಅವರಿಗೊಂದು ಕಂದು ಕೊಡುತ್ತೇನೆಂದಾಗ ಅವರಿಗಾದ ಆನಂದ ! ಬರೆದು ಬಣ್ಣಿಸಲಾದೀತೆ? ಮುಂದೇನಾಯಿತೆಂಬುದು ಗೊತ್ತೇ ಇದೆಯಲ್ಲ?

ತಮ್ಮ ಗುಡಿಸಲು ಸೇರಿದ ಆ ಮಕ್ಕಳು ಬೂದ ತುಕ್ರಿಯರು - ಮರುದಿನ ಬೆಳಿಗ್ಗೆ ಎಲ್ಲರಿಗಿಂತ ಮೊದಲು ಎಚ್ಚೆತ್ತು ತೌಡನನ್ನು ಬೇಡಿ ಕಾಡಿ ಅದನ್ನು ನೆಡಿಸಿದರು. ತೌಡನು ದಿನಗೂಲಿ ಮಾಡಿ ಸಂಸಾರ ಹೊರುವ ಕಡುಬಡವ. ಆದರೆ ಇರಲಿಕ್ಕೊಂದು ಮಾಡು ಬೇಕಲ್ಲ? ಅದಕ್ಕಾಗಿ ಕೋಟೆಮನೆ ನಾಗಪ್ಪನವರ ನಾಲ್ಕಾರು ಚೋಕು ತೆಂಗಿನ ಪಾಳು ತೋಟದ ಆ ಗುಡಿಸಲಲ್ಲಿ ಇದ್ದ. ಅದಕ್ಕೂ ಆರು ರೂಪಾಯಿ ಗೇಣಿ ಕೊಟ್ಟು ಗುಡಿಸಲು ಜಾವಣಿ ಮಾಡಿಕೊಳ್ಳಬೇಕಿತ್ತು. ಮೇಲಾಗಿ ಧನಿಯರ ಬಿಟ್ಟಿ ಬೇಗಾರಿಯಂತೂ ಇದ್ದದ್ದೇ. ಆ ಜಾಗದಲ್ಲಿ ಏನಾದರೂ ಬಾಳೆ ತರಕಾರಿಗಳನ್ನು ಬೆಳೆಯಿಸಬಹುದೆಂದರೆ ತೌಡನ ಪಾಳು ತೋಟವು ನೆರೆಹೊರೆಯ ಆಢ್ಯರ ಆಕಳುಗಳ ಆಹಾರ ಕ್ಷೇತ್ರ. ಅವನ್ನು ಹಾಗೆಲ್ಲ ಬಿಟ್ಟುಬಿಡಬಾರದೆಂದು ಹೇಳುವ ಅಥವಾ ಹೊಡೆದೋಡಿಸುವ ಎದೆಗಾರಿಕೆಯು ಬಡ ತೌಡನಿಗೆಲ್ಲಿಂದ? ನಾಳೆ ಅವರಲ್ಲಿಯೇ ದುಡಿದು ಎರಡು ಸೇರಕ್ಕಿಯ ಪಥ್ಯ ತರಬೇಕಲ್ಲ ಅವನಿಗೆ? ಅಲ್ಲದೆ ಆಢ್ಯರ ಅವಕೃಪೆಗೆ ಈಡಾಗಿ ಬಡವನು ಅವರೆದೆಯಲ್ಲಿ ದಿನ ದೂಡಲಾಪನೆ? ಅದರಿಂದಾಗಿ ತೌಡನಾವುದನ್ನೂ ನೆಡುತ್ತಿದ್ದಿಲ್ಲ. ಆದರೆ ಈಗ ಈ ಮಕ್ಕಳ ಕಾಟಕ್ಕಾಗಿ ನೆಟ್ಟ. ನೆಟ್ಟ ಮೇಲೆ ಕಾಪಾಡಿಕೊಡದಿದ್ದರೆ ಇವರ ಅನುದಿನದ ಗೋಳಾಟ ಅವನು ಮನೆಹೊಕ್ಕಾಗಲೆಲ್ಲ ತಪ್ಪುವಂತಿದ್ದಿಲ್ಲ. ಆದುದರಿಂದ ಒಲೆಯೊಟ್ಟುವ ಅನಿವಾರ್ಯ ಅವಶ್ಯಕತೆಗಾಗಿ ಕೂಡಿಟ್ಟ ಕೊತ್ತಳಿಗೆಗಳನ್ನು ಆ ಕಂದಿನ ಸುತ್ತ ನೆಟ್ಟು ಗಟ್ಟಿಮುಟ್ಟಿನ ಬೇಲಿ ಮಾಡಿದ. ಅಷ್ಟಾದ ಮೇಲೆಯೇ ಆ ಮಕ್ಕಳು ಅಂದು ಗಂಜಿಯೂಟಕ್ಕೆ ಒಳಗೆ ಹೋದುದು.

***

ಅಂದಿನಿಂದ ಬೂದ - ತುಕ್ರಿಯರು ಹೊತ್ತಾರೆ ಎದ್ದು ಕಣ್ಣೊರಸೊರಸಿಕೊಳ್ಳುತ್ತಾ ಹೋಗಿ ಮೊದಲು ನೋಡುವುದು ಆ ಕಂದನ್ನು ದಿನದಲ್ಲಿ ಅದನ್ನೆಷ್ಟು ಸಲ ನೋಡುತ್ತಿದ್ದರೋ ಲೆಕ್ಕವಿಟ್ಟವರಾರು? ಮುಸಂಜೆಗೆ ಗುಡಿಸಲು ಸೇರುವ ಮೊದಲೊಮ್ಮೆ ಅದನ್ನು ನೋಡಿಕೊಂಡು ಬರದಿದ್ದರೆ ಅವರಿಗೆ ನಿದ್ದೆ ಹತ್ತದು. ಹೀಗೆ ಅವರು ದಿನ - ದಿನ ನೋಡುತ್ತಿದ್ದಂತೆ, ಅದರ ಬುಡದಲ್ಲಿ ಹೋಗಿ ನಿಂತು ಅದರ ಬೆಳವಣಿಗೆಯ ಕುರಿತು ಮಾತುಕತೆಯಾಡುತ್ತಿದ್ದಂತೆ, ಆ ಕಂದು ಸುಳಿಸುಳಿಯಾಗಿ ಬೆಳೆಬೆಳೆದು ಬಾಳೆಯ ಮರವಾಯಿತು. ಬೇಸಿಗೆಯು ಬಂದಾಗ ಬೂದ - ತುಕ್ರಿಯರಿಗೆ ಕುಡಿಕೆ ಹಿಡಿದು ಕೆರೆಯಿಂದ ನೀರು ಹೊತ್ತು ಬಾಳೆಯ ಬುಡಕ್ಕೆ ಸುರಿದಷ್ಟು ಸಾಲದು. ಅದರಿಂದಾಗಿ ಆ ಮಕ್ಕಳ ಮೈಯಿಂದೆಷ್ಟು ಬೆವರು ಸುರಿದಿತ್ತೋ ಅಳೆದವರಾರು?

ಬೇಸಿಗೆಯು ಹೋಗಿ ಮುಂಗಾರು ಮಳೆಯ ಮೋಡವೆದ್ದಿದ್ದ. ಅದೊಂದು ರಾತ್ರಿ ಬೂದನೆದ್ದು ಅಳತೊಡಗಿದ ''ಅಯ್ಯೋ ಗಾಳಿ ! ಗಾಳೀ! ನಮ್ಮ

ಬಾಳೆ ಮುರಿದು ಬಿದ್ದರೆ!'' ಎಂದು ಬಿಕ್ಕಿ ಬಿಕ್ಕಿ ಕೂಗಿದ. ತೌಡನೆದ್ದು ಹೋಗಿ ಅದಕ್ಕೆ ಸುತ್ತಲೂ ನಾಲ್ಕು ಕೊತ್ತಳಿಗೆಗಳನ್ನು ಊತುಕೊಟ್ಟು ಕಟ್ಟಿ ತೋರಿಸಿ ಸಮಾಧಾನಗೊಳಿಸಿದ ಮೇಲೆ ಹುಡುಗನು ಹೋಗಿ ತಿರುಗಿ ನಿದ್ದೆ ಮಾಡಿದ.

ಒಂದು ದಿನ ತುಕ್ರಿಯು ಬಾಳೆಯ ಬುಡದಲ್ಲಿ ನಿಂತು ಕುಣಿಕುಣಿದು ''ಅಣ್ಣಾ ! ಅಣ್ಣಾ!'' ಎಂದು ಕೂಗಿದಳು. ಬೂದನು ಓಡಿಹೋಗಿ ನೋಡುತ್ತಾನೆ, ಬಾಳೆಯ ತುದಿಯಲ್ಲಿ ಹೂವಿನ ಮೂತಿ! ದಿನ ಹೋದಂತೆ ಹೂವು ಹೊರಬಂತು; ಬೆರಳು ಬಿಟ್ಟಿತು. ಬೆರಳುಗಳು ಬಲಿಬಲಿತು ತೋರಕಾಯಿಗಳಾದವು. ಬೂದ - ತುಕ್ರಿಯರೊಂದಿಗೆ ಚಿಕ್ಕದೂಮನೂ ಹೋಗಿ ಗೊನೆಯನ್ನು ನೋಡುತ್ತ ನಿಲ್ಲುತ್ತಿದ್ದ. ಅದು ಹಣ್ಣಾದಾಗ ಅವನಿಗೂ ಪಾಲು ಕೊಡುವುದಾಗಿ ಅಣ್ಣಂದಿರು ಹೇಳುತ್ತಿದ್ದರು. ಅವರು ಹೊತ್ತುತಂದ ಕಂದು; ಅವರಪ್ಪ ನೆಟ್ಟ ಕಂದು; ಅವರು ನೀರೆರೆದು ಬೆಳೆಯಿಸಿದ ಕಂದು; ಅದು ಬಿಟ್ಟ ಗೊನೆಯು ಅವರದು. ಅದು ಹಣ್ಣಾದಾಗ ಅದನ್ನೆಲ್ಲರಿಗೆ ಪಾಲುಮಾಡಿ ಹಂಚುವವರೂ ಅವರೇ. ಅವರಪ್ಪನಿಗೂ ಒಂದು ಪಾಲಿದೆ ಅದರಲ್ಲಿ.

***

''ತೌಡಾ, ಆ ಗೇಣಿ ಬಾಕಿ ಎರಡು ರೂಪಾಯಿ ಯಾವಾಗ ಕೊಡುವುದೊ? ಅದೇನು ನಿನ್ನ ವರ್ಗದ ತೋಟವೆಂದು ತಿಳಿದೆಯಾ?'' ಎಂದು ಗುಡುಗುಡಿಸಿ ನುಡಿದರು. ನಾಗಪ್ಪಯ್ಯ. ತೌಡನು ಅವರ ಮೋರೆ ನೋಡದೆ ಕತ್ತುತಗ್ಗಿಸಿಕೊಂಡು ದೀನತೆಯ ಬೇಳುದನಿಯಲ್ಲಿ ''ಈ ಮಳೆಗಾಲ ಸಾಗಲಿ ! ಕಬ್ಬು ಹೂಡುವ ಆಲೆಯ ಕಾಲದಲ್ಲಿ ಹೇಗಾದರೂ ದುಡಿದು ಉಳಿಸಿ ತೀರಿಸುತ್ತೇನೆ'' ಎಂದ. ಧನಿಯರು ಏನೇನೋ ಸಿಟ್ಟುಮಾತಾಡಿ ಕೊನೆಗೆ, ''ಯಾವಾಗ ಕೇಳಿದರೂ ಇಂದಿಲ್ಲ ಮುಂದೆ ಎಂದೆನ್ನುವ ನಿನ್ನ ರೋಗ ಇದ್ದೇ ಇದೆ ! ಆಗಲಿ, ಆಲೆಯ ಕಾಲದವರೆಗೂ ಕಾದು ಬಿಡುತ್ತೇನೆ'' ಎಂದು ಸಮಾಧಾನಕ್ಕೆ ಬಂದು, ''ಆಗ ತೋಟದತ್ತ ಕಡೆಯಿಂದ ಬರುತ್ತಿದ್ದಾಗ ಆ ಬಾಳೆಯ ಗೊನೆಯನ್ನು ನೋಡಿದೆ. ನಾಡದು ಹುಣ್ಣಿಮೆ ನಮ್ಮಲ್ಲೊಂದು ಸತ್ಯನಾರಾಯಣ, ನಾಳೆಯೇ ಕಡಿದಿಟ್ಟರೆ ಅಂದಿಗೆ ಹಣ್ಣಾದೀತು, ಹುಣ್ಣಿಮೆಯ ಬೆಳಗ್ಗೆ ತಂದುಕೊಟ್ಟುಬಿಡು ! ತಿಳಿಯಿತೇ?'' ಎಂದರು. ತೌಡನಿಗೆ ಸಿಡಿಲು ಬಡಿದಂತಾಯಿತು ! ಅವನೇನು ಹೇಳಿಯಾನು? ಮೌನವಾಗಿದ್ದ. ''ಏನು ಹೇಳಿದ್ದು ಕೇಳಿತೇ'' ಎಂದರು. ತುಸು ಬಿರುಸಿನ ದನಿಯಲ್ಲಿ ಧನಿಯರು. ತೌಡನು ಅಂಜುತ್ತಂಜುತ್ತ ನಾಲಿಗೆ ತಡವರಿಸುತ್ತಾ, ಮಕ್ಕಳು ಬಹಳ ಆಸೆಯಿಂದ ಬೆಳೆಸಿದ್ದು. ಕೆಳಗಿನ ಒಂದೆರಡು ಸಣ್ಣ ಹಣಿಗೆಯಾದರೂ ಆ ಮಕ್ಕಳಿಗೆ...'' ಎನ್ನುವಷ್ಟರಲ್ಲೇ ಧನಿಯರು, 'ಮಕ್ಕಳಿಗೆ ರಸಬಾಳೆ ಹಣ್ಣೋ, ಮಣ್ಣೋ! ದೇವರ ಬಾಯಿಗೆ ಬೀಳಲಿ! ಮಕ್ಕಳು ಮೈಕ್ಕೆ ಸುಖಕೊಡುತ್ತಾನೆ. ಸತ್ಯನಾರಾಯಣ ! ಮಕ್ಕಳಿಗಿಟ್ಟುಕೊಂಡು ದೇವರಿಗೆ ಕೊಡೋದೇ? ಹೀಗೆಲ್ಲ ಮಾಡೋದ್ರಿಂದ್ಲೇ ನಿತ್ಯ ದರಿದ್ರ ತಪ್ಪೋದಿಲ್ಲ ನಿಮಗೆಲ್ಲ!'' ಎನ್ನುತ್ತ ತಿರುಗಿ ಕಂಪೇರ ತೊಡಗಿದರು.

***

ತೌಡನು ಗುಡಿಸಲಿಗೆ ಬಂದ. ನಡೆದ ಸಂಗತಿಯನ್ನೆಲ್ಲ ಹೆಂಡತಿ ದೆಯ್ಯಿಗೆ ಗುಟ್ಟಾಗಿ ಹೇಳಿದ. ಅವಳು ''ಅಯ್ಯೋ ದೇವರೆ, ಮಕ್ಕಳು ಒಂದು ವರ್ಷದಿಂದ ಬೆವರು ಸುರಿದು ನೀರೆರೆದು ಹಣ್ಣು ತಿಂದೇವೆಂದು ಆಸೆ ಮಾಡಿ ಮಾಡಿ ಕಡೆಗೆ...'' ಎನ್ನುವಷ್ಟರಲ್ಲೇ ಅವಳಿಗೆ ಕಣ್ಣೀರು ಬಂತು, ಕುತ್ತಿಗೆ ಬಿಗಿಯಿತು. ಮಾತು ಮುಂದುವರಿಯದಂತಾಯಿತು. ಆದರೇನು ಮಾಡುವುದು? ಹಣ್ಣಿನ ಗೊನೆಯು ಹುಣ್ಣಿಮೆಯ ದಿನ ಧನಿಯರ ಅಂಗಳವೇರಲೇಬೇಕು! ತೌಡನು ಗೊನೆಯನ್ನು ಕಡಿದ. ಮಕ್ಕಳು ಸಂತೋಷ ದಿಂದ ಕುಣಿದಾಡಿದವು. ಹಲವು ಪ್ರಶ್ನೆಗಳನ್ನು ಕೇಳಿದವು. ''ನೀವೆಲ್ಲ ರಗಳೆ ಮಾಡಬೇಡಿರಿ ನೋಡೋಣ'' ಎಂದೊಂದೇ ಮಾತಿನಿಂದ ತನ್ನ ರಗಳೆಯನ್ನು ನುಂಗಿಕೊಳ್ಳುತ್ತ ಅವರ ಬಾಯಿ ಕಟ್ಟಿಸಿ, ಗೊನೆಯನ್ನು ಒಳಗೆ ತೂಗಹಾಕಿ ಬರಕು ಬಟ್ಟೆ ಸುತ್ತಿದ. ಮಕ್ಕಳು ದಿನದಿನವೂ ಅದು ಹಣ್ಣಾಯಿತೋ ಎಂದು ಹಲವು ಹದಿನೆಂಟು ಸಲ ಎಡೆಯಿದ್ದಲ್ಲಿ ಇಣುಕಿ ನೋಡುತ್ತಿದ್ದವು. ಹುಣ್ಣಿಮೆಗೆರಡು ದಿನ ಮುಂಚೆ ಬಟ್ಟೆಯ ಹರುಕಿನೆಡೆಯಲ್ಲಿ ಕಾಯಿಯೊಂದು ಅರಸಿನ ಬಣ್ಣ ತಾಳಿದುದನ್ನು ಬೂದ ಕಂಡು ಹಿರಿಹಿರಿ ಹಿಗ್ಗಿ ತಂದೆಯ ಬಳಿಗೋಡಿ ಹೇಳಿದ. ''ಇಲ್ಲ ಅದಿನ್ನೂ ಚೆನ್ನಾಗಿ ಹಣ್ಣಾಗಿಲ್ಲ. ನೀವು ನಡುನಡುವೆ ಹೀಗೆಲ್ಲ ರಗಳೆ ಮಾಡಿದರೆ ನಾನದನ್ನು ತೆಗೆದು ತೋಡಿಗೆ ಬಿಸಾಡುತ್ತೇನೆ'' ಎಂದು ತೌಡನೆಂದುದೇ ತಡ, ಮಕ್ಕಳು ಬೆದರಿ ಮೌನವಾದರು.

ಹುಣ್ಣಿಮೆಯ ದಿನ ಹೊತ್ತಾರೆ ಮಕ್ಕಳೆದ್ದು ನೋಡುತ್ತಾರೆ. ಬಾಳೆಯ ಗೊನೆಯೂ ಇಲ್ಲ! ತಂದೆಯೂ ಇಲ್ಲ! ಗೋಳೋ ಗೋಳು ಮೂರು ಮಕ್ಕಳದು! ದೆಯ್ಯಿಯು ಅವರನ್ನು ಸಮಾಧಾನ ಗೊಳಿಸುವುದಕ್ಕೆ ಏನೇನೋ ಕಾಳಬೆಕ್ಕು ತಿಂದುಹೋದ ಕತೆ ಹೇಳಿದಳು. ಅದನ್ನು ಕೇಳಿ ಚಿಕ್ಕ ದೂಮನು, ''ಆ - ಆ - ಆ - ಆ ಕಾಲ ಬೆಪ್ಪೆಪ್ಪೆಕ್ಕೂ ಸ - ಸ - ಸ್ವತ್ತೇ ಒ - ಒ - ಒಗ್ಗೀ!'' ಎಂದರೂ, ಬೂದ ತುಕ್ರಿಯರು ಅಂತಹ ಕತೆಯನ್ನು ನಂಬಿ ಸಮಾಧಾನವಾಗು ವಂತಿದ್ದಿಲ್ಲ. ಕೊನೆಗೆ ದೆಯ್ಯಿಯು ''ಅದನ್ನು ಧನಿಯರಲ್ಲಿಗೆ ಅಪ್ಪಕೊಂಡು ಹೋದರು. ಅಲ್ಲಿ ಸತ್ನಾರ್ಣದೇವ್ರುಗೆ ಅದು ಬೇಕಂತೆ!'' ಎಂದಳು. ''ದೇವ್ರು ಅದನ್ನು ತಿನ್ನುತ್ತಾರೆಯೇ?'' ಎಂದು ಬೂದನ ಪ್ರಶ್ನೆ. ''ದೇವ್ರಿಗೆ ಅಷ್ಟೂ ಬೇಕಿತ್ತೇ? ನಮಗೆ ಎರಡೆರಡು - ಒಂದೊಂದು ಆದರೂ ಇರಬಾರದಾಗಿತ್ತೆ?'' ಎಂದು ತುಕ್ರಿಯ ತರ್ಕ. ''ಹೋಗಲಿ, ಆ ಆಲೋಚನೆ ಬಿಡಿ. ಅದರ ಎರಡು ಮೂರು ಕಂದುಗಳಿವೆ. ಯಾವುದಾದರೊಂದು ಬೇಗನೆ ದೊಡ್ಡದಾಗಿ ಗೊನೆ ಹಾಕಿತು. ಅದು ಪೂರಾ ನಿಮಗೇ'' ಎನ್ನುತ್ತ ಮಕ್ಕಳ ಆ ಅಳು ಮೋರೆಯನ್ನು ನೋಡಲಾರದೆ ಒಳಗೆ ಹೋಗಿಬಿಟ್ಟಳು ತಾಯಿ. ಆದರೆ ಆ ಮಕ್ಕಳು ಮನೆಯಲ್ಲಿ ಏನೋ ಮಹಾವಿಪತ್ತು ಸಂಭವಿಸಿದ್ದಂತೆ ತಲೆಗೊಂದು ಕೈಗೊಟ್ಟು ಜೋಲುಮೋರೆ ಹಾಕಿ ಕಣ್ಣೀರೊರಸಿಕೊಳ್ಳುತ್ತ ಜಗಲಿಯಲ್ಲಿ ಕುಳಿತಿದ್ದುವು. ತುಸು ಹೊತ್ತಾದ ಮೇಲೆ ಅದೇನು ಯೋಚನೆ ಹೊಳೆಯಿತೋ... ಆ ಬೂದನಿಗೆ -ನೋಡಿ, ಅವನು ಅಂಗಳಕ್ಕೆ ಹಾರಿದ ! 'ತುಕ್ರೀ, ಬಾ'' ಎನ್ನುತ್ತ ಬಾಳೆಯ ಕಂದುಗಳಿರುವೆಡೆಗೆ ಧಾವಿಸುತ್ತಿದ್ದಾನೆ. ತುಕ್ರಿಯೂ ಓಡಿ ಸೇರಿದ್ದಾಳೆ. ನೋಡಿ, ಬೂದನು ಆ ಕಂದಳನ್ನು ಒಂದೊಂದಾಗಿ ಹಿಡಿಹಿಡಿದು ಬಗ್ಗಿಸಿ ತಿರುತಿರುವಿ ಮುರಿಯುತ್ತ, 'ಇ ಇ ಇ ಇವು ಗೊನೆ ಹಾಕೋದೂ ಬೇಡ ಆ ಆ ಆ ಆ ಸತ್ ನಾರ್ನಾಣೀ ತಿತಿತ್ತಿನ್ನೋದೂ ಬೇಡಾ!' ಎನ್ನುತ್ತ ಅವನ್ನೆಲ್ಲ ಸೀಳಿ ಸೀಳಿ ಮುರಿಮುರಿದು ಹಾಕಿ ಅಲ್ಲೆಲ್ಲ ಕೆಸರೇಳುವಂತೆ ಅವುಗಳ ಮೇಲೆ ತಕತಕ ಕುಣಿಯುತ್ತಿದ್ದಾಳೆ ! ಅದೇನು ಆವೇಶ ! ಅದೆಂತಹ ನೃತ್ಯ !

(ಕೃಪೆ : ಶತಮಾನದ ಸಣ್ಣ ಕತೆಗಳು)

FOR ALL YOUR DOMESTIC AND INTERNATIONAL TRAVEL ARRANGEMENTS
CONTACT
AUGUST TRAVEL SERVICE
Agents For
INDIAN AIRLINES & JET AIRLINES
REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 2789 1970*2789 1972
2789 2451
GRAMS : AUGTRASERV
ALSO AT :
2/16, KABBUR HOUSE,
SION (E), MUMBAI-400 022.
PHONES : 2407 2984*2409 3573
2407 7750

# ಸಾರಸ್ವತ ಲೋಕಕ್ಕೆ ಕನ್ನಡಿಗರ ಅದ್ಭುತ ಕೊಡುಗೆ 'ಸಿರಿ ಭೂವಲಯ'

✍ ವೈ.ಕೆ. ಮೋಹನ್

ಈಗ್ಗೆ ಕೆಲವು ದಿನಗಳ ಹಿಂದೆ ಶ್ರೀ ವೈ.ಕೆ. ಮೋಹನ್ ಮೈಸೂರು ಅಸೋಸಿಯೇಶನ್‌ಗೆ ಬಂದು ನನ್ನನ್ನು ಭೇಟಿ ಮಾಡಿದರು. ಶ್ರೀ ವೈ.ಕೆ. ಮೋಹನ್ ಅಸೋಸಿಯೇಶನ್‌ನ ಹಳೆಯ ಸದಸ್ಯರು **1990**ರ ದಶಕದಲ್ಲಿ ಅಸೋಸಿಯೇಶನ್‌ನಲ್ಲಿ ಬಹಳಷ್ಟು ಓಡಾಡುತ್ತಿದ್ದರು. ಮುಂದೆ ಹಿಂದುಸ್ತಾನ್ ಏರೋನಾಟಿಕಲ್ ಲಿಮಿಟೆಡ್‌ನಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿದ್ದರಿಂದ ಮುಂಬಯಿ ಬಿಟ್ಟು ಬೆಂಗಳೂರಿಗೆ ವಲಸೆ ಹೋದರು. ಈಗ ಅಲ್ಲೇ ಸ್ಥಾಯಿಯಾಗಿರುತ್ತಾರೆ. ಇದಿಷ್ಟೂ ಅವರೇ ಹೇಳಿಕೊಂಡ ಪರಿಚಯ. ಯಾಕೆಂದರೆ **1970**ರ ದಶಕದಲ್ಲಿ ನನಗೆ ಅಸೋಸಿಯೇಶನ್ನಿನ ನಂಟಿರಲಿಲ್ಲ. ಅವರು ಮಾತ್ರ ಹಳೆಯ ನಂಟನ್ನು ಮರೆಯದೆ ವಿಶ್ವಾಸದಿಂದ ಸಕುಟುಂಬರಾಗಿ (ಹೆಂಡತಿ, ಮಗ, ಸೊಸೆ, ಸೋದರಳಿಯರೊಡಗೂಡಿ) ಅಸೋಸಿಯೇಶನ್ನಿಗೆ ಭೇಟಿ ಕೊಟ್ಟಾಗ ನಮ್ಮ ಮುಖಾಮುಖಿಯಾಯಿತು.

ಶ್ರೀ ವೈ.ಕೆ. ಮೋಹನ್ ಈಗ ವೃತ್ತಿಯಿಂದ ನಿವೃತ್ತರಾಗಿದ್ದರೂ ಸುಮ್ಮನೆ ಕೂಡುವ ಜಾಯಮಾನದವರಲ್ಲವಾಗಿ ಉತ್ತಮ ಪುಸ್ತಕಗಳ ಪ್ರಕಾಶನಕ್ಕೆ ಕೈ ಹಾಕಿರುತ್ತಾರೆ. ಅವರೇ ಪ್ರಕಾಶಿಸಿರುವ ಇತ್ತೀಚಿನ ಪುಸ್ತಕವೇ 'ಸಿರಿ ಭೂವಲಯ' ಪುಸ್ತಕದ ಹೆಚ್ಚಳವನ್ನು ಅವರು ಅಚ್ಚು ಹಾಕಿಸಿ ಕೊಟ್ಟಿರುವ ಮಾಹಿತಿಯೊಡನೆ ಇಲ್ಲಿ ಪ್ರಕಟಿಸಲು ಕೊಟ್ಟಿದ್ದೇನೆ. ಇಂಥ ಒಂದು ಪುಸ್ತಕ ಕನ್ನಡದಲ್ಲಿದ್ದರೂ ಇಷ್ಟು ದಿನ ಅಜ್ಞಾತವಾಗಿದ್ದು ಈಗ ಪ್ರಕಾಶನಗೊಳ್ಳುತ್ತಿದೆ ಎಂಬುದು ಹೆಮ್ಮೆಯ ವಿಷಯ. ಅವರ ಈ ಪ್ರಯತ್ನ ಯಶಸ್ವಿಯಾಗಲಿ ಎಂಬುದು ಮೈಸೂರು ಅಸೋಸಿಯೇಶನ್ನಿನ ಹಾಗೂ ನೇಸರುವಿನ ಹಾರೈಕೆ.

ಶ್ರೀ ವೈ.ಕೆ. ಮೋಹನ್ ಈ ಗ್ರಂಥದ ಇನ್ನುಳಿದ ಭಾಗವನ್ನು ಹೊರತರಲು ವಿಶೇಷವಾಗಿ ಕಂಪ್ಯೂಟರ್ ತಂತ್ರಜ್ಞಾನಿಗಳ ಸಹಾಯವನ್ನು ಬಯಸುತ್ತಿದ್ದಾರೆ. ಅವರ ಸೊಸೆ ಸ್ವತಃ ಕಂಪ್ಯೂಟರ್ ವಿಜ್ಞಾನಿ. ಅವರಿಗೆ ಸಹಾಯವಾಗಲೆಂದು ತಮ್ಮ ವೃತ್ತಿ ಜೀವನವನ್ನು ಬದಿಗಿಟ್ಟು ಎಲ್ಲಾ ಸಮಯವನ್ನು ಗ್ರಂಥ ಸಂಗ್ರಹಣೆಗೆ ಮೀಸಲಿಟ್ಟಿರುತ್ತಾರೆ. ಆದರೆ ಇದು ಬಹಳಷ್ಟು ಜನರ ಸಹಕಾರದಿಂದ ಆಗಬೇಕಾದ ಕೆಲಸ. ಆಸಕ್ತರು ಅವರನ್ನು ಕೊನೆಯಲ್ಲಿ ಕೊಟ್ಟಿರುವ ವಿಳಾಸದಲ್ಲಿ ಸಂಪರ್ಕಿಸಬಹುದು.

- ಭವಾನಿ

ರಾಷ್ಟ್ರಕೂಟ ಅರಸರಲ್ಲಿ ನೃಪತುಂಗ ಅಮೋಘವರ್ಷನಿಗೆ ಒಂದು ವಿಶೇಷ ಸ್ಥಾನವಿದೆ. ಕನ್ನಡಿಗರ ವಂಶಸ್ಥನಾದ ಈತನ ರಾಜಧಾನಿ ಮಾನ್ಯಖೇಟ (ಈಗಿನ ಮಾಳಖೇಡ) ಕ್ರಿ.ಶ. 814 ರಿಂದ 877ರಲ್ಲಿ, ಈ ನೃಪತುಂಗ ಚಕ್ರವರ್ತಿ, 'ಕವಿರಾಜ ಮಾರ್ಗ'ವನ್ನು ರಚಿಸಿದ ಕನ್ನಡ ಭಾಷೆಗೆ ಈ ಗ್ರಂಥವು ಆದಿ ಮಹಾಸಾರಸ್ವತ ಸಂಪತ್ತೆಂದು ಪರಿಗಣಿತವಾಗಿದೆ. ಈತನ ಆಸ್ಥಾನದಲ್ಲಿದ್ದ ಜೈನ ದಿಗಂಬರಾಚಾರ್ಯರಾದ ವೀರಸೇನಾಚಾರ್ಯರು ಬಹಳ ಪ್ರಸಿದ್ಧರು. ಇವರು ಕ್ರಿ.ಶ. 814 ರಿಂದ 820ರಲ್ಲಿ ರಚಿತವಾದ ಧವಳ, ಜಯಧವಳಾ ಟೀಕಾ ಕರ್ತೃ. ಇದರ ಕೊನೆಯ ಭಾಗವನ್ನು ಇವರ ಶಿಷ್ಯರಾದ ಜಿನಸೇನಾಚಾರ್ಯರು ಪೂರ್ಣಗೊಳಿಸಿದರು. ವೀರಸೇನಾಚಾರ್ಯರಿಗೆ ಜಿನಸೇನ ಮತ್ತು ಕುಮುದೇಂದು ಎಂಬ ಇಬ್ಬರು ಶಿಷ್ಯರಿದ್ದರು. ಜೈನ ಪುರಾಣವಾದ ಮಹಾಪುರಾಣದ ಕರ್ತೃ ಜಿನಸೇನಾಚಾರ್ಯರು.

'ಸಿರಿ ಭೂವಲಯ' ಗ್ರಂಥ'ವು 8ನೇ ಶತಮಾನದಲ್ಲಿ ವೀರಸೇನಾಚಾರ್ಯರ ಶಿಷ್ಯರಾದ ಕುಮುದೇಂದು ಮುನಿಯಿಂದ ರಚಿತವಾಯಿತು. 'ಸಿರಿಭೂವಲಯ' ಗ್ರಂಥದಲ್ಲಿ ಕುಮುದೇಂದು ಮುನಿಯು ಸಮಕಾಲೀನ ದೊರೆಯಾದ ಸಯಿಗೊಟ್ಟ ಸಿವಮಾರನನ್ನು ಅನೇಕ ಕಡೆ ಪ್ರಸ್ತಾಪಿಸಿದ್ದಾನೆ. ಈಗಿನ ನಂದಿಬೆಟ್ಟದ ತಪ್ಪಲಿನಲ್ಲಿ 1500 ಜನ ಶಿಷ್ಯರೊಡಗೂಡಿ ಕುಮುದೇಂದು ಮುನಿ ಇದ್ದನೆಂಬುದಕ್ಕೆ ಸಿರಿಭೂವಲಯ ಗ್ರಂಥದಲ್ಲಿ ಅನೇಕ ಕಡೆ ಪ್ರಸ್ತಾಪವಿದೆ.

ಈಗಿನ ಕಂಪ್ಯೂಟರ್‌ಗಳಲ್ಲಿ ಬಳಸಲಾಗುತ್ತಿರುವ ಅಂಕಾಕ್ಷರ ವಿಜ್ಞಾನವನ್ನು ಕನ್ನಡಿಗನೇ ಆದ ಕುಮುದೇಂದು ಮುನಿ 8ನೇ ಶತಮಾನದಲ್ಲೇ ತನ್ನ 'ಸಿರಿಭೂವಲಯ' ಗ್ರಂಥದಲ್ಲಿ ಪರಿಚಯಿಸಿದ್ದಾನೆ. ಅತಿ ಆಶ್ಚರ್ಯ ಮತ್ತು ಅದ್ಭುತವೆನ್ನುವ ಸಕಲ ಕಲೆಗಳನ್ನೂ, ಎಲ್ಲಾ ಸಾಹಿತ್ಯವನ್ನೂ 718 ಭಾಷೆಗಳಲ್ಲಿ ಒಂದೇ ಪುಟದಲ್ಲಿ ಈ ಅಂಕಾಕ್ಷರ ವಿಜ್ಞಾನದಿಂದ 'ಸಿರಿಭೂವಲಯ' ಗ್ರಂಥದಲ್ಲಿ ಅಡಗಿಸಿ, ಗ್ರಂಥವನ್ನು ಸರ್ವಭಾಷಾಮಯಿಯನ್ನಾಗಿ ಮಾಡಿದ್ದುದರಿಂದ ಈ ಗ್ರಂಥವು ಜಗತ್ತಿನ 10ನೇ ಅದ್ಭುತವೆಂದರೆ ಅತಿಶಯೋಕ್ತಿಯಲ್ಲ.

ನೃಪತುಂಗನ ಆಸ್ಥಾನದಲ್ಲಿದ್ದ ಸೇನಾಪತಿಯ ಹೆಂಡತಿಯಾದ ಮಲ್ಲಿಕಬ್ಬೆ ಎಂಬ ಜೈನ ಮಹಿಳೆಯು ಕುಮುದೇಂದು ಮುನಿಯ 'ಸಿರಿಭೂವಲಯ' ಗ್ರಂಥದ ಎಂಟು ಪ್ರತಿಗಳನ್ನು ಮಾಡಿ ಎಂಟು ಜನ ಜೈನಾಚಾರ್ಯರುಗಳಿಗೆ ಶಾಸ್ತ್ರದಾನ ಮಾಡಿದ್ದಳು. ಆ ಪೈಕಿ ಒಂದು ಪ್ರತಿಯು ಕಾಗದದ ಪ್ರತಿರೂಪದಲ್ಲಿ ಆಸ್ಥಾನ ವಿದ್ವಾಂಸರೂ, ಶತಾವಧಾನಿಗಳೂ ಆದ ದೊಡ್ಡಬೆಲೆ ಊರಿನ ದಿ॥ ಧರಣೇಂದ್ರ ಪಂಡಿತರಲ್ಲಿತ್ತು. ತದನಂತರ, ಅವರ ತಮ್ಮನ ಅಳಿಯಂದಿರಾದ ಪಂ॥ ಶ್ರೀ ಎಲ್ಲಪ್ಪ ಶಾಸ್ತ್ರಿಗಳಿಗೆ ದೊರೆಯಿತು. ಅವರು ಆ ಗ್ರಂಥ'ವನ್ನು 30 ವರ್ಷಗಳ ಅವಿಶ್ರಾಂತ ಪರಿಶ್ರಮದಿಂದ ಬೆಳಕಿಗೆ ತಂದರು.

'ಸಿರಿಭೂವಲಯ' ಗ್ರಂಥವು ಪ್ರಪಂಚದಲ್ಲೇ ಒಂದು ವಿಶಿಷ್ಟ ಗ್ರಂಥವಾಗಿದೆ. ಸಾಮಾನ್ಯವಾಗಿ ಪ್ರತಿಯೊಂದು ಗ್ರಂಥವೂ ಆಯಾ ಭಾಷೆಯ ಲಿಪಿ ಮಾಧ್ಯಮದಲ್ಲಿ ರಚಿತವಾಗಿರುತ್ತದೆ. ಆದರೆ ಈ ಗ್ರಂಥವು ಯಾವುದೇ ಭಾಷೆಯ ಲಿಪಿಯೂ ಇಲ್ಲದೆ, ಅಂಕಿಗಳ ಮಾಧ್ಯಮದಲ್ಲಿ ಚಕ್ರ ಬಂಧ ರೂಪದಲ್ಲಿ ರಚಿತವಾಗಿದೆ. 27x27 ಅಳತೆಯ ಚೌಕಾಕಾರ ರೂಪದ 729 ಮನೆಗಳಲ್ಲಿ 1ರಿಂದ 64 ಅಂಕಗಳನ್ನು ಹೊಂದಿದೆ. ಇಲ್ಲಿ ಕನ್ನಡ ಅಂಕಿಗಳನ್ನೇ ಉಪಯೋಗಿಸಲಾಗಿದೆ. (ಪಕ್ಕದಲ್ಲಿ ಪ್ರಕಟಿಸಿರುವ ಸಂಖ್ಯಾ ಬಂಧ ಹಾಗೂ ಅಕ್ಷರಗಳ ಬಂಧವನ್ನು ನೋಡಿರಿ)

ಈಗ 1270 ಚಕ್ರಗಳು ಮಾತ್ರ ಲಭ್ಯವಿದೆ. ಇದರಿಂದ 16000 ಚಕ್ರ ಬಂಧಗಳಾಗುವುದೆಂದು ಹೇಳಲಾಗಿದೆ. ಮೇಲೆ ತಿಳಿಸಿದ 64 ಅಂಕಿಗಳ ಪ್ರಯೋಗವು ಹೀಗಿವೆ. 27 ಸ್ವರಗಳೂ (9 ಸ್ವರಗಳು- ಹ್ರಸ್ವ, ದೀರ್ಘ ಮತ್ತು ಪ್ಲುತ 9x3 = 28). 25 ವ್ಯಂಜನಗಳೂ, 8 ಯೋಗ ವಾಹಗಳೂ ಮತ್ತು 4 ಆಯೋಗ ವಾಹಗಳೂ ('0' ಬಿಂದು, ':' ವಿಸರ್ಗ, .....ಉಪಧ್ಮಾನೀಯ, '' ಜಿಹ್ವಾಮೂಲೀಯ) ಸೇರಿ 64 ಕನ್ನಡ/ದೇವನಾಗರೀ ಅಕ್ಷರ ಲಿಪಿಗಳನ್ನು ಧ್ವನಿಗಳೆಂದೇ ಪ್ರಯೋಗಿಸಲಾಗಿದೆ. ಈ ಚಕ್ರ ಬಂಧದಲ್ಲಿನ ಅಂಕಿಗಳನ್ನು ಕ್ರಮವಾಗಿ ಅಕ್ಷರಗಳಿಗೆ ಪರಿವರ್ತಿಸುವುದರಿಂದ ಕಾವ್ಯಗಳು ಸೃಷ್ಟಿಯಾಗುತ್ತದೆ ಹಾಗೂ ಗಣಿತ ಸಿದ್ಧಾಂತದ ಮೂಲಕ 1 ರಿಂದ 64 ಧ್ವನಿಗಳಲ್ಲಿ ಒಂದು ವಿಶಿಷ್ಟ ರೀತಿಯ ನಾನಾ ಸಂಯೋಗಭಂಗಗಳ (ಪರ್ಮ್ಯುಟೇಷನ್, ಕಾಂಬಿನೇಷನ್) ಮೂಲಕ ಪ್ರಪಂಚದ ಸಕಲ ಶಬ್ದಾಗಮವು 92 ಬಿಡಿ ಅಂಕ (Digit) ಗಳಲ್ಲಿ ಮುಕ್ತಾಯವಾಗುವುದೆಂದೂ, ಅದರಲ್ಲಿ ಹಿಂದಿನ, ಈಗಿನ ಮತ್ತು ಮುಂದಿನ ಎಲ್ಲಾ ಶಬ್ದಾಗಮಗಳೂ ಆಗಲೇ ತಾನಾಗಿ ಹುಟ್ಟಿವೆ ಎಂದೂ ತೋರಿಸಲಾಗಿದೆ.

'ಸಿರಿಭೂವಲಯ' ಗ್ರಂಥವು ಕನ್ನಡ ಭಾಷೆಯ ಧ್ವನಿಗಳನ್ನೇ ಪ್ರಧಾನವಾಗಿಟ್ಟುಕೊಂಡು ಪ್ರಪಂಚದ 718 ಭಾಷೆಗಳಿಗೂ ಪರಿವರ್ತನೆ ಮಾಡಲು ಸಾಧ್ಯವಾಗಿರುವ ಏಕೈಕ ಗ್ರಂಥ'ವಾಗಿದೆ. ಆ ಕಾರಣದಿಂದಲೇ ಈ ಗ್ರಂಥ'ವನ್ನು 'ಸರ್ವಭಾಷಾಮಯೀ' ಎಂದು ಕರೆಯಲಾಗಿದೆ. ಈ ಅಂಕಾಕ್ಷರ ವಿಜ್ಞಾನದಲ್ಲಿ ಪ್ರಪಂಚದಲ್ಲಿರುವ ಸಕಲ ಭಾಷೆಗಳನ್ನೂ ಕಟ್ಟಿಡುವ ಮಹಾಶಕ್ತಿ ಕನ್ನಡಕ್ಕಿದೆ ಎಂದು

ಕುಮುದೇಂದು ಮುನಿ ತೋರಿಸಿದ್ದಾನೆ.

ಇದೇ ನವಮಾಂಕ ಪದ್ಧತಿ. ಈಗ ನಾವು ಜಗತ್ತಿನಾದ್ಯಂತ ಬಳಸುತ್ತಿರುವುದೇ ದಶಮಾಂಕ (Decimal) ಪದ್ಧತಿ. ಅಂದರೆ ಎಲ್ಲಾ ಅಂಕಿ ಸಂಖ್ಯೆಗಳನ್ನು Base-9ಕ್ಕೆ ಅಳವಡಿಸಿದಾಗ ಬರುವುದೇ ನವಮಾಂಕ ಪದ್ಧತಿ. ಇದನ್ನೇ ಈಗಿನ ಕಂಪ್ಯೂಟರ್‌ಗಳು ಅಳವಡಿಸಿಕೊಂಡಿರುವುದು. ಈ ಗ್ರಂಥದಲ್ಲಿರುವುದು ಗಣಕ ಯಂತ್ರದ (Computer Coded all written in Multiples of Nine) ನವಮಾಂಕ ಪದ್ಧತಿ. ಇದನ್ನೇ Base-೨ ಬಳಸಿ ಅತ್ಯಾಧುನಿಕ ಗಣಕ ಯಂತ್ರಗಳು ಕೆಲಸ ಮಾಡುತ್ತಿರುವುದು. ಈ ಗ್ರಂಥದಲ್ಲಿ ಬಳಸಲಾದ ಅಂಕಗಳು ಸಾವಿರ ವರ್ಷಗಳ ಹಿಂದೆಯೇ ಅಳವಡಿಸಲ್ಪಟ್ಟಿರುವುದರಿಂದ ಗಣಕ ಯಂತ್ರ (Computer) ಜ್ಞಾನವು ನಮ್ಮಲ್ಲಿ ಆಗಲೇ ಇದ್ದಿತೆಂದು ಹೇಳಬಹುದು. ಹಾಗೂ 1ರಿಂದ 9 ಮತ್ತು '0' ಯಿಂದಲೇ ಬರೆಯಲ್ಪಡುವ ಅಂಕಗಳು 1ರಿಂದ 64ರ ವರೆಗೆ ಧ್ವನಿ ಅಥವಾ ಅಕ್ಷರಗಳಾಗಿ ಪ್ರಪಂಚದ ಎಲ್ಲಾ ಭಾಷೆಗಳಲ್ಲಿ ಎಲ್ಲಾ ವಿಧವಾದ ಧ್ವನಿಗಳನ್ನು ಕಟ್ಟಬಹುದು.

'ಸಿರಿ ಭೂವಲಯ' ಗ್ರಂಥದಲ್ಲಿ ವೇದಾಂತ, ವೈದ್ಯ, ರಸಾಯನ ಶಾಸ್ತ್ರ, ಗಣಿತ, ಅಣುಶಾಸ್ತ್ರ ಜ್ಯೋತಿಷ್ಯ, ಲೋಹ ವಿಜ್ಞಾನ, ಆಕಾಶ/ ಜಲಗಮನ ವಿದ್ಯೆಯೂ, ಜೀವ ವಿಜ್ಞಾನವೇ ಮೊದಲಾದ ವಿಷಯಗಳು ಒಳಗೊಂಡಿವೆ ಎಂದು ಕವಿಯು ತಿಳಿಸಿದ್ದಾನೆ ಮತ್ತು ಈ ಗ್ರಂಥದಲ್ಲಿ ಋಗ್ವೇದ, ರಾಮಾಯಣ, ಭಾರತ, ಭಗವದ್ಗೀತೆ, ತತ್ವಾರ್ಥ ಸೂತ್ರ, ಋಷಿ ಮಂಡಲ ಹಾಗೂ ಅಪೂರ್ವವಾದ ಸಂಸ್ಕೃತ ಶ್ಲೋಕಗಳೂ ಇತ್ಯಾದಿಯಾಗಿ ಅನೇಕ ವಿಷಯಗಳನ್ನೂ ಅಡಗಿಸಲಾಗಿದೆ ಎಂದು ತಿಳಿಸುತ್ತಾನೆ. 'ಸವಿಯಾಗಿಸಿ ಪೌಢ ಮೂಢರೀರ್ವರಿಗೆ ಒಂದೇ ನವಪದ ಭಕ್ತಿ ಭೂವಲಯ' ಎನ್ನುತ್ತಾನೆ. ಅಂದರೆ, ಬುದ್ಧಿವಂತರಿಗೂ, ಜ್ಞಾನಿಗಳಿಗೂ ಮತ್ತು ಸಾಮಾನ್ಯರಿಗೂ ಕೂಡ ಗ್ರಂಥವನ್ನು ಓದುವುದರಿಂದ ಅವರವರಿಗೆ ತಕ್ಕ ಜ್ಞಾನ ಬೋಧನೆಯಾಗುವುದು ಎನ್ನುತ್ತಾನೆ. ಅನೇಕ ಗಹನವಾದ ವಿಚಾರಧಾರೆಯನ್ನು ಈ ಗ್ರಂಥದಲ್ಲಿ ಅಡಗಿಸಿದ್ದೇನೆ ಎಂದು ಕುಮುದೇಂದು ಮುನಿಯು ಹೇಳಿದ್ದಾನೆ.


'ಸಿರಿಭೂವಲಯ'ದಲ್ಲಿ ಒಟ್ಟು 9 ಖಂಡಗಳಿವೆ. ಮೊದಲನೆಯ ಖಂಡವೇ ಮಂಗಲ ಪ್ರಾಭೃತ. ಈ ಖಂಡದ ಮೂರನೇ ಒಂದು ಭಾಗ ಮಾತ್ರ ಸಿದ್ಧಪಡಿಸಲಾಗಿದೆ. 1953ರಲ್ಲಿ ಈ ಗ್ರಂಥದ 1ಮತ್ತು 2ನೇ ಭಾಗಗಳನ್ನು ಸಂಕ್ಷೇಪ ಮಾಡಿ 33 ಅಧ್ಯಾಯಗಳನ್ನು ಮಾತ್ರ ಶ್ರೀ ಎಲ್ಲಪ್ಪ ಶಾಸ್ತ್ರಿಗಳು ಅಚ್ಚುಹಾಕಿಸಿ ಜನತೆಯ ಮುಂದೆ ಇಟ್ಟು ಹೋಗಿದ್ದಾರೆ. ಅಚ್ಚಾದ ಈ ಗ್ರಂಥದ ಚರಿತ್ರಾರ್ಹ ವಿಮರ್ಶೆಗಳನ್ನು ಮುನ್ನುಡಿ ರೂಪದಲ್ಲಿ ದಿವಂಗತ ಕರ್ಲಮಂಗಲಂ ಶ್ರೀಕಂಠಯ್ಯನವರು ಸಂಪಾದಕರಾಗಿಯೂ ಹಾಗೂ ಈ ಗ್ರಂಥದ ಬಗ್ಗೆ ಘನ ಮೈಸೂರು ವಿಶ್ವವಿದ್ಯಾಲಯ ಪ್ರಾಚ್ಯ ಶೋಧ ವಿಭಾಗದ ಕೀರ್ತಿಶೇಷ ಎಸ್. ಶ್ರೀಕಂಠ ಶಾಸ್ತ್ರಿ, ಎಂ.ಎ.ಡಿ.ಲಿಟ್. ಅವರೂ ಮತ್ತು ಕನ್ನಡ ಬೆರಳಚ್ಚು ಯಂತ್ರವನ್ನು ಸಿದ್ಧಪಡಿಸಿದ ದಿವಂಗತ ಕೆ. ಅನಂತ ಸುಬ್ಬರಾಯ ಅವರೂ ಈ 'ಸಿರಿಭೂವಲಯ' ಗ್ರಂಥಕ್ಕೆ ಸಲ್ಲಿಸಿರುವ ಅಮೋಘ ಸೇವೆಯನ್ನು ನಾವು ಸ್ಮರಿಸುವೆವು.

ಈ ಗ್ರಂಥದ ಇತರ ಉದ್ದೇಶಿತ ಕಾರ್ಯಗಳು ಶ್ರೀಮಾನ್ ಪಂಡಿತ ಎಲ್ಲಪ್ಪ ಶಾಸ್ತ್ರಿಗಳ ನಿಧನದಿಂದ ಸ್ಥಗಿತವಾಗಿತ್ತು. ಅವರ ಮಕ್ಕಳಾದ ಶ್ರೀ ಎಂ.ವೈ. ಧರ್ಮಪಾಲ್ ಅವರು ತಮ್ಮ ಉದ್ಯೋಗದಿಂದ ನಿವೃತ್ತರಾದಮೇಲೆ ಈ ಜವಾಬ್ದಾರಿಯನ್ನು ತಾವೊಬ್ಬರೇ ಹೊರಲು ಸಾಧ್ಯವಾಗದೇ ಕೆಲವರು ವಿದ್ವಾಂಸರುಗಳನ್ನು ಜೊತೆಗೂಡಿಸಿಕೊಂಡು 'ಸಿರಿಭೂವಲಯ ಫೌಂಡೇಶನ್ (ರಿ)' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದನ್ನು ನಿಯಮಿತ ಸಂಸ್ಥೆಯಾಗಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮಾನ್ ಮೋರೋಪಂತ್ ಪಿಂಗಳೆಯವರು ಈ ಗ್ರಂಥದ ಮಹತ್ವವನ್ನು ಅರಿತು ಗ್ರಂಥದ ಜ್ಞಾನದ ಪ್ರಯೋಜನ ಮಾನವ ಜನಾಂಗಕ್ಕೆ ಹಿನ್ನೆಲೆಯಲ್ಲಿ ಲಭ್ಯವಾಗಿಸುವ ವಿಶಾಲ ದೃಷ್ಟಿಯಿಂದ ಸಿರಿಭೂವಲಯ ಗ್ರಂಥದ ಸಂಪೂರ್ಣ ಮುದ್ರಣ, ಪ್ರಕಾಶ ಸಂಕಲ್ಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬಾಬಾ ಸಾಹೇಬ್ ಆಪ್ಟೆ ಸ್ಮಾರಕ ಸಮಿತಿಯಿಂದ 'ಸಿರಿಭೂವಲಯ' ಗ್ರಂಥ ಅಧ್ಯಾಯಗಳನ್ನು ಹಿಂದಿಯಲ್ಲಿ ಅಚ್ಚುಮಾಡಿಸಿ ಪ್ರಕಟಿಸುವ ಕಾರ್ಯದಲ್ಲಿದ್ದಾರೆ. 'ಸಿರಿಭೂವಲಯ- ಪರಿಚಯ' ಮತ್ತು 'ದಿ। ಪಂಡಿತ ಎಲ್ಲಪ್ಪ ಶಾಸ್ತ್ರಿಗಳವರ ಜೀವನ ಚರಿತ್ರೆ' ಎಂಬ ಎರಡು ಕೃತಿಗಳನ್ನು ಜನ ಸಾಮಾನ್ಯರಿಗೆ ತಲುಪಿಸಲೆಂದು 'ಪುಸ್ತಕ ಶಕ್ತಿ' ಪ್ರಕಾಶನ, 103, 3ನೇ ಅಡ್ಡ ರಸ್ತೆ, ಟಾಟಾ ಸಿಲ್ಕ್ ಫಾರಂ, ಬೆಂಗಳೂರು-4 ದೂರವಾಣಿ:-6915917 ಇವರು ಆ ಎರಡು ಕೃತಿಗಳನ್ನು ಶ್ರೀ ಧರ್ಮಪಾಲ ಅವರಿಂದ ಪಡೆದು ಮುದ್ರಿಸಿ ಪ್ರಕಾಶಿಸಲು ಮುಂದೆ ಬಂದಿದ್ದಾರೆ.

'ಸಿರಿಭೂವಲಯ'ದ ಜ್ಞಾನ ಸಂಪತ್ತು ಮತ್ತು ಪ್ರಯೋಜನ ಮಾನವ ಸಮಾಜಕ್ಕೆ ಸಂಪೂರ್ಣವಾಗಿ ಲಭಿಸಲಿ ಎಂಬುದು ಕುಮುದೇಂದು ಮುನಿಯ ಮಹದುದ್ದೇಶ. ಈ ಮಹಾತ್ಕಾರ್ಯವನ್ನು ಮಾಡುವ ಪ್ರಯತ್ನ ನಮ್ಮದು. ಇದಕ್ಕೆ ಕೈ ಜೋಡಿಸಿ, ಪ್ರೋತ್ಸಾಹಿಸುವ ಕೆಲಸ ನಿಮ್ಮದು. ಹೆಚ್ಚಿನ ಮಾಹಿತಿಗಾಗಿ ಸಿರಿಭೂವಲಯ ಫೌಂಡೇಶನ್ (ರಿ.) ಅವರನ್ನು ಸಂಪರ್ಕಿಸಿರಿ.

ಪುಸ್ತಕ ಶಕ್ತಿ, ನಂ.103, 3ನೇ ಮೈನ್ ರೋಡ್,
ಟಾಟಾ ಸಿಲ್ಕ್ ಫಾರಂ, ಬಸವನಗುಡಿ,
ಬೆಂಗಳೂರು - 560 004
ಫೋನ್ : (O) 6915917
Fax.: 6768229.

(ಪುಟ 15ಕ್ಕೆ)



ಭಾರತೀಯ ಕಲೆ (ಪುಟ ೩ರಿಂದ)

ಅರ್ಧಶಿಲ್ಪಾಕೃತಿಯನ್ನು ಉಲ್ಲೇಖಿಸಬಹುದು. ಇಲ್ಲಿ ಆಭರಣಗಳ ಕೆತ್ತನೆ, ಅಲಂಕೃತ ವಸ್ತ್ರವಿನ್ಯಾಸ ಮುಂತಾದವುಗಳ ಸೂಕ್ಷ್ಮ ವಿವರಣೆಯನ್ನು ಕಾಣಬಹುದಾಗಿದೆ.

### ಪೂರ್ವದ ಗಂಗರು

ಕ್ರಿ.ಶ. ೮ರಿಂದ ೧೫ನೇ ಶತಮಾನದವರೆಗೆ ಪ್ರಸ್ತುತ ಒರಿಸ್ಸಾ ಭಾಗದಲ್ಲಿ ಪೂರ್ವದ ಗಂಗರ ವಂಶವು ಅಧಿಕಾರದಲ್ಲಿತ್ತು. ಕರ್ನಾಟಕದ ಗಂಗರು ಇವರ ಸಂಬಂಧೀಕರೆಂದು ಸಾಕ್ಷ್ಯಾಧಾರಗಳಿಂದ ಹೇಳಬಹುದಾಗಿದೆ. ನಂತರದ ರಾಜರು ಚೋಳರ ಪ್ರಭಾವಕ್ಕೆ ಒಳಗಾಗಿ ರಾಜರಾಜ ಚೋಳನ ನೇತೃತ್ವದಲ್ಲಿ ಕಳಿಂಗ ಪ್ರದೇಶವನ್ನು ಆಕ್ರಮಿಸಿಕೊಂಡರು. ಈ ಗಂಗರು ಚೋಳರೊಂದಿಗೆ ವಿವಾಹವನ್ನು ಬೆಳೆಸಿದರು, ಆದರೆ ಕ್ರಿ.ಶ. ೧೦೯೦ರಲ್ಲಿ ಬಂದ ಅನಂತವರ್ಮ ದೊಡ್ಡಗಂಗನು ಚೋಳರಿಂದ ಸ್ವಾತಂತ್ರ್ಯವನ್ನು ಘೋಷಿಸಿದನು. ಪುರಿಯ ಜಗದ್ವಿಖ್ಯಾತ ಜಗನ್ನಾಥ ದೇವಾಲಯ ನಿರ್ಮಾಣದ ಸ್ಥಾಪಕ ಈ ಅನಂತವರ್ಮ. ನಂತರ ಬಂದ ಒಂದನೇ ನರಸಿಂಹನು ಕೊನಾರ್ಕದ ಸೂರ್ಯದೇವಾಲಯದ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿದವನು. ಒರಿಸ್ಸಾ ರಾಜ್ಯದ ಗಂಜಾಂ ಜಿಲ್ಲೆಯಲ್ಲಿರುವ ಈಗಿನ ಮುಖಲಿಂಗ ಅಂದರೆ ಅಂದಿನ ಕಳಿಂಗ ಗಂಗರ ರಾಜಧಾನಿಯಾಗಿತ್ತು.

ಈ ಭಾಗದ ದೇವಾಲಯಗಳು ಹೊರಗಿನ ನಿರ್ಮಾಣದಲ್ಲಿ ಉತ್ತರದ ನಾಗರ ಮಾದರಿಯನ್ನು ಹೋಲುತ್ತವೆ. ಅಸಂಖ್ಯಾತ ಶಿಲ್ಪಾಕೃತಿಗಳಿಂದ ಹೊರಾವರಣಗಳನ್ನು ಅಲಂಕೃತಗೊಳಿಸಲಾಗಿದೆ. ಈ ಶೈಲಿಯ ಉದಾಹರಣೆಗೆ ನಾವು ಪರಶುರಾಮೇಶ್ವರ, ವೈತಾಳ ದೇವಳ (ಪ್ರಾರಂಭದ ಅವಧಿ ಕ್ರಿ.ಶ. ೭೫೦-೯೦೦), ಲಿಂಗರಾಜ ದೇವಸ್ಥಾನ (ಮಧ್ಯದ ಅವಧಿ ಕ್ರಿ.ಶ. ೯೦೦-೧೧೦೦) ಮತ್ತು ರಾಜರಾಣಿ ಹಾಗೂ ಕೋನಾರ್ಕ (ನಂತರದ ಅವಧಿ ಕ್ರಿ.ಶ. ೧೧೦೦-೧೨೫೦) ದೇವಾಲಯಗಳನ್ನು ಉದಾಹರಿಸಬಹುದು. ಮೇಲೆ ಹೇಳಿದ ದೇವಸ್ಥಾನಗಳಲ್ಲಿ ಪ್ರಾಚೀನವಾದದ್ದೆಂದರೆ ಪರುಶರಾಮೇಶ್ವರ ದೇವಸ್ಥಾನ. ಇಲ್ಲಿ ನಾವು ಶಿವನ ವಿವಿಧ ರೂಪಗಳನ್ನು ದೇವಸ್ಥಾನದ ಹೊರಾವರಣದಲ್ಲೇ ಕಾಣುತ್ತೇವೆ. ಆದರೆ ದಕ್ಷಿಣ ಮತ್ತು ಪೂರ್ವ ಗೋಡೆಗಳಲ್ಲಿ ಗಣೇಶ ಮತ್ತು ಕಾರ್ತಿಕೇಯನ ಶಿಲ್ಪಗಳನ್ನು ಮಾತ್ರ ಕಾಣುತ್ತೇವೆ. ನಾಲ್ಕು ಕೈಗಳನ್ನುಳ್ಳ ಗಣೇಶ ಸಿಂಹಾಕೃತಿಯ ಸಿಂಹಾಸನದ ಮೇಲೆ ಕುಳಿತಿರುವುದು ಇಲ್ಲಿನ ಒಂದು ವೈಶಿಷ್ಟ್ಯ. ಮೇಲಿನ ಎಡಗೈಯಲ್ಲಿರುವ ಮೋದಕವನ್ನು ತೆಗೆದುಕೊಳ್ಳಲು ಆತನ ಸೊಂಡಿಲು ಮುಂದೆ ಚಾಚಿದ್ದು ಕೆಳಗಿನ ಎಡಗೈಯಲ್ಲಿ ಪರಶು ಆಯುಧ ಇದೆ. ಈ ವರ್ಣನೆ ಅಪರೂಪವಾದದ್ದೆಂದು ಹೇಳಬಹುದು.

ವೈತಾಳ ದೇವಳದ ಹೊರಗಿನ ವರಾಂಡದಲ್ಲಿ ಮಿಥುನ ಶಿಲ್ಪಗಳ ಹಾಗೂ ಮಹಿಷಾಸುರ ಮರ್ಧಿನಿಯ ಶಿಲ್ಪಗಳಿವೆ. ಈ ಮಹಿಷಾಸುರ ಮರ್ಧಿನಿಗೆ ಗಂಗರು ತೋರುವ ಭಕ್ತಿ ಹಾಗೂ ಪ್ರಾಮುಖ್ಯತೆಗಳನ್ನು ಇಲ್ಲಿ ಕಾಣಬಹುದಾಗಿದೆ. ಒರಿಸ್ಸಾದ ಕಲಾವಿದರು ಮಹಿಷಾಸುರ ಮರ್ಧಿನಿಯಲ್ಲಿ ಶಕ್ತಿಯ ಹಿರಿಮೆಯನ್ನು ಎದ್ದು ಕಾಣುವಂತೆ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಭುವನೇಶ್ವರದ ಲಿಂಗರಾಜ ದೇವಾಲಯವು ಶಿಲ್ಪ ಮತ್ತು ವಾಸ್ತು ಶಿಲ್ಪದ ದೃಷ್ಟಿಯಿಂದ ಇತರ ದೇವಾಲಯಗಳಿಗಿಂತ ಪರಿಪೂರ್ಣತೆಯನ್ನು ಪಡೆದಿದೆ ಎಂಬುದು ನಿಸ್ಸಂಶಯ. ಇಲ್ಲಿ ಶಿಲ್ಪ ಮತ್ತು ವಾಸ್ತು ಶಿಲ್ಪವು ಒಂದಕ್ಕೊಂದು ಪೂರಕವಾಗಿರುವಂತೆ ನಿರ್ಮಾಣವಾಗಿದ್ದು ಇಲ್ಲಿಯ ಅಲಂಕಾರಿಕ ಶಿಲ್ಪಗಳು ವಾಸ್ತು ಶಿಲ್ಪದ ಆಶಯಕ್ಕೆ ಕುಂದು ಬಾರದಂತಿವೆ. ಈ ದೇವಸ್ಥಾನದ ಮೇಲ್ಭಾಗದಲ್ಲಿ ಶಿಲ್ಪಗಳನ್ನು ಕೆತ್ತಲಾಗಿದ್ದು ಅವುಗಳಲ್ಲಿ ಪಾರ್ವತಿ ಶಿಲ್ಪವು ಅತ್ಯಂತ ಸುಂದರವಾಗಿದೆ. ಈ ವಿಗ್ರಹದ ಆಭರಣ ಹಾಗೂ ವಸ್ತ್ರವಿನ್ಯಾಸ ರಚನೆಯಲ್ಲಿ ಅತ್ಯಂತ ಸೂಕ್ಷ್ಮತೆಯನ್ನು ಪ್ರದರ್ಶಿಸಲಾಗಿದೆ. ಲಿಂಗರಾಜ ದೇವಸ್ಥಾನದ ಒಂದು ಅತ್ಯಂತ ಶ್ರೇಷ್ಠವಾದ ಕಲಾಕೃತಿಯೆಂದರೆ ನಾಯಿಕ ವಿಗ್ರಹ. ಇಲ್ಲಿ ಪಾರದರ್ಶಕ ಉಡುಪಿನ ಮೇಲೆ ನೆರಳು ಬೆಳಕಿನ ಪ್ರಭಾವವನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದು ವಿಗ್ರಹ ದೈವಿಕ ಕಳೆಯನ್ನು ಹೊರಹೊಮ್ಮುತ್ತಿದೆ. ಜಾರಿದ ಕೆಳವಸ್ತ್ರದಿಂದಾಗಿ ಅವಳ ನಗೆಯಲ್ಲಿ ನಾಚಿಕೆ ಮೂಡಿರುವುದು ಬಹಳ ಸುಂದರವಾಗಿ ಮೂಡಿದೆ. ಶಿರ ಹಾಗೂ ಶರೀರದ ವಕ್ರತೆ ಮತ್ತು ನವಿರಾದ ಬೆರಳುಗಳಿಂದ ಇದೊಂದು ಅದ್ಭುತ ಶಿಲ್ಪವಾಗಿದೆ.

ರಾಜರಾಣಿ ದೇವಸ್ಥಾನವು ಬಹುಶಃ ಅಲ್ಲಿ ದೊರೆಯುವ ರಾಜಾರಾಣಿಯ ಎಂಬ ಮರಳುಗಲ್ಲಿನಿಂದ ಈ ಹೆಸರನ್ನು ಪಡೆದಿರಬಹುದು. ಈ ದೇವಸ್ಥಾನದಲ್ಲಿ ವಿಶಿಷ್ಟವಾಗಿ ಎದ್ದು ಕಾಣುವ ಶಿಲ್ಪಾಕೃತಿಗಳೆಂದರೆ ಅಪ್ಸರ ಕನ್ಯೆಯರು ಮತ್ತು ದಿಕ್ಪಾಲಕರು. ದೇವಸ್ಥಾನದ ಕೆಳಭಾಗದ ಮೂಲೆಗಳಲ್ಲಿ ಈ ವಿಗ್ರಹಗಳು ಮುಂದೆ ಚಾಚಿರುವ ಹಾಗೆ ಕೆತ್ತಲಾಗಿದ್ದು ನೀಳವಾಗಿ ತೆಳುವಾದ ದೇಹ ರಚನೆಯನ್ನು ಹೊಂದಿ ವಿವಿಧ ಭಂಗಿಗಳಲ್ಲಿವೆ. ಇವುಗಳ ಮುಖವು ದುಂಡಾಗಿದ್ದು ಕಿರು ಹಾಗೂ ವಿಶಾಲವಾದ ನಾಸಿಕವನ್ನು ಹೊಂದಿವೆ. ಕೈಗಳು ಮಂಡಿಯವರೆಗೆ ನೀಳವಾಗಿದೆ. ಅತಿಕಡಿಮೆ ಉಡುಪಿನ ಈ ವಿಗ್ರಹಗಳಲ್ಲಿ ಪುರುಷ ವಿಗ್ರಹಗಳಿಗೆ ಕೇವಲ ಮುತ್ತಿನ ಹಾರವನ್ನು ಅಲಂಕರಿಸಿದ್ದಾರೆ. ಸ್ತ್ರೀ ವಿಗ್ರಹಗಳಿಗೆ ವಿವಿಧ ಹಾರಗಳನ್ನು ತೊಡಿಸಿದ್ದು ಕೇಶಾಲಂಕಾರವು ಧಾಮಿಳ ಶೈಲಿಯಲ್ಲಿದೆ.

ಒಡಿಸ್ಸಾದ ಶಿಲ್ಪಕಲಾವಿದರು ಪಡೆದ ಅಭಿವೃದ್ಧಿಯ ಮತ್ತೊಂದು ಹಂತವನ್ನು ಕೊರ್ನಾಕದ ಶಿಲ್ಪಕೃತಿಗಳು ಸಾರಿ ಹೇಳುತ್ತವೆ. ಇಲ್ಲಿನ ಸೂರ್ಯ ದೇವಾಲಯವು ಕುದುರೆಯಿಂದ ಎಳೆಯಲ್ಪಡುತ್ತಿರುವ ರಥದ ಮಾದರಿಯಲ್ಲಿದೆ. ಈ ದೇವಾಲಯದ ಸುತ್ತಲೂ ಇರುವ ಭಾರಿಗಾತ್ರದ ೧೨ ರಥ ಚಕ್ರಗಳು ಅಡಿಪಾಯದಂತಿವೆ. ಪ್ರತಿಯೊಂದು ಚಕ್ರದಲ್ಲೂ ೧೬ ಅರೆಗಳಿದ್ದು ಪ್ರತಿಯೊಂದನ್ನು ಬಹಳ ಸೂಕ್ಷ್ಮವಾಗಿ ಕೆತ್ತಲಾಗಿದೆ. ಇದರ ಮಧ್ಯದಲ್ಲಿ ವೃತ್ತಾಕಾರದ ಬಲೆಗಳನ್ನು ಜೋಡಿಸಲಾಗಿದೆ. ದೇವಸ್ಥಾನದ ಸುತ್ತಲ ಪ್ರಾಕಾರದಲ್ಲಿ ಅಶ್ವ ಮತ್ತು ಆನೆಗಳು ಬಹಳ ನೈಜವಾಗಿದ್ದು ಅವುಗಳ ಗಾಂಭೀರ್ಯ ಮತ್ತು ಧಾರ್ಢ್ಯತೆಗಳು ಎದ್ದು ಕಾಣುವಂತಿದೆ ಅಷ್ಟೇ ಅಲ್ಲ ಇಲ್ಲಿರುವ ಮಿಥುನ ಶಿಲ್ಪಗಳಲ್ಲೂ ಕಲಾ ಪ್ರೌಢಿಮೆಯನ್ನು ಕಾಣಬಹುದಾಗಿದೆ.

ದೇವಾಲಯದ ಗರ್ಭಗುಡಿಯ ಸುತ್ತಲು ಇರುವ ಸ್ತಂಭಗಳ ಮೇಲೆ ನಾಟ್ಯ ಭಂಗಿಯಲ್ಲಿರುವ ಶಿಲ್ಪಗಳಲ್ಲಿ ವಿವಿಧ ಸಂಗೀತ ಉಪಕರಣಗಳನ್ನು ಹಿಡಿದಿರುವುದು ಕಾಣುತ್ತೇವೆ. ಇಲ್ಲಿ ನೃತ್ಯ ಭಂಗಿಗಿಂತ ಹೆಚ್ಚಾಗಿ ಮೋಹಕತೆಯನ್ನೇ ಪ್ರದರ್ಶಿಸುತ್ತವೆ. ಇಲ್ಲಿನ ವಿಗ್ರಹಗಳಲ್ಲಿ ಒಬ್ಬ ನೃತ್ಯಗಾರ್ತಿಗೆ ಇರಬೇಕಾದ ತೆಳು ಹಾಗೂ ನಯವಾದಂತಹ ಶಾರೀರಿಕ ಸೌಂದರ್ಯ ಇದೆ, ಕೇವಲ ಮೋಹಕತೆಯನ್ನು ಪ್ರತಿಪಾದಿಸು ವಂತಿದೆ. ಆದರೆ ಇಲ್ಲಿನ ಮಿಥುನ ಶಿಲ್ಪಗಳಲ್ಲಿ ಶೃಂಗಾರ ಮತ್ತು ಕಲಾ ಪ್ರೌಢಿಮೆಯನ್ನು ಕಾಣುತ್ತೇವೆ.

ನಾಟ್ಯ ಮಂದಿರವನ್ನು ದಾಟಿ ಮುಂದೆ ಹೋದರೆ ಸಿಗುವ ಮಂಟಪದಲ್ಲಿ ಮೂರು ಕಡೆ ವಿಶಿಷ್ಟವಾಗಿ ಕೊರೆಯಲಾಗಿರುವ ಗೂಡುಗಳಲ್ಲಿ ಸೂರ್ಯನ ಪ್ರತಿಮೆಗಳನ್ನು ನಿಲ್ಲಿಸಲಾಗಿದೆ. ಇವುಗಳಲ್ಲಿ ಒಂದು ಗೂಡಿನಲ್ಲಿ ಮಾತ್ರ ಸೂರ್ಯ ದೇವನನ್ನು ಸಾಮ ಭಂಗಿಯಲ್ಲಿ ನಿಲ್ಲಿಸಲಾಗಿದೆ. ದೇವಾಲಯದ ರಚನೆಗೆ ಬಳಸಿದ ಕಲ್ಲನ್ನು ಇಲ್ಲಿ ಬಳಸದೇ ಹಸಿರು ಬಣ್ಣದ ಕ್ಲೋರೈಟ್ ಕಲ್ಲನ್ನು ಸೂರ್ಯನ ಪ್ರತಿಮೆಯ ನಿರ್ಮಾಣಕ್ಕೆ ಬಳಸಿರುವುದು ಇಲ್ಲಿನ ವಿಶೇಷ. ಸೂರ್ಯದೇವನ ಶಿರದ ಹಿಂದಿರುವ ಪ್ರಭಾವಳಿಯು ಮೂರು ವಲಯದಲ್ಲಿದ್ದು ಇಕ್ಕೆಲಗಳಲ್ಲಿ ಕಮಲಗಳನ್ನು ಕೆತ್ತಲಾಗಿದೆ. ಆಭರಣಗಳು ಚಪ್ಪಟೆಯಾಗಿ ವಿಶಿಷ್ಟ ಶೈಲಿಯಿಂದ ಕೂಡಿದೆ. ನೇತಾಡುವ ಕರ್ಣಕುಂಡಲಗಳು, ಕಂಠಾಭರಣಗಳು, ಯಜ್ಞೋಪವೀತ, ತೋಳ್ಬಂದಿ, ಸೊಂಟಪಟ್ಟಿ ಮುಂತಾದವುಗಳನ್ನು ಬಹಳ ನಯವಾಗಿ ಕೆತ್ತಲಾಗಿದೆ. ಸೂರ್ಯದೇವನ ಪಾದದಲ್ಲಿ ಖಡ್ಗಧಾರಿ ಸೇವಕರನ್ನು ಕೆತ್ತಲಾಗಿದೆ. ಬೃಹತ್ತಾದ ಸೂರ್ಯದೇವನ ಪಾದದ ಮುಂದೆ ಸಾರಥಿ ಅರುಣ ಕಿರಿಯ ಗಾತ್ರದಲ್ಲಿದ್ದು ಸೂರ್ಯನ ರಥವನ್ನು ಆಕಾಶದಲ್ಲಿ ಕೊಂಡೊಯ್ಯುವಂತೆ ಕಡೆಯಲಾಗಿದೆ. ಕುದುರೆಗಳ ಭಂಗಿಯು ಸದಾಚಲನೆಯಲ್ಲಿರುವ ಹಾಗೆ ರೂಪಿಸಲಾಗಿದೆ.

(ಮುಂದುವರಿಯುವುದು)

## ಬೆಂಗಳೂರಿನಲ್ಲಿ ಮಿಂಚಿದ ಮುಂಬಯಿ ಕಲಾವಿದರು

ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯವು ಪ್ರತಿ ವರ್ಷ ಸಂಗೀತ ಪರೀಕ್ಷೆಗಳಿಗೆ ಬೆಂಗಳೂರಿಗೆ ವಿದ್ಯಾರ್ಥಿಗಳನ್ನು ಕರೆದೊಯ್ದು, ಪರೀಕ್ಷೆ ಮಾಡಿಸಿಕೊಂಡು ಬರುತ್ತಿದೆ. ಈ ವರ್ಷದ ವೈಶಿಷ್ಟ್ಯವೆಂದರೆ, ಪರೀಕ್ಷೆಗೆಂದು ಬೆಂಗಳೂರಿಗೆ ಹೋದ ವಿದ್ಯಾರ್ಥಿಗಳು ಪರೀಕ್ಷೆಯಷ್ಟೇ ಅಲ್ಲದೇ




ಸಂಗೀತ ಕಾರ್ಯಕ್ರಮಗಳನ್ನು ಕೊಟ್ಟು ರಸಿಕರ ಮೆಚ್ಚುಗೆಗೆ ಪಾತ್ರರಾಗಿ ಬಂದರು.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಏರ್ಪಡಿಸಿದ್ದ ಪ್ರತಿ ಬುಧವಾರ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕನ್ನಡ ಭವನದ ನಯನ ಸಭಾಗೃಹದಲ್ಲಿ ವಿದ್ಯಾಲಯದ ವಿದ್ಯಾರ್ಥಿನಿಯರಾದ ಸೌಮ್ಯ, ಸುಕನ್ಯ ಹಾಗೂ ಗಾಯತ್ರಿರವರು ಸುಶ್ರಾವ್ಯ ಕರ್ನಾಟಕ ಸಂಗೀತ ಕಚೇರಿ ನಡೆಸಿ ಶ್ರೋತೃಗಳ ಮೆಚ್ಚುಗೆ ಗಳಿಸಿದರು.

ನವರಾಗ ಮಾಲಿಕೆ ವರ್ಣದಿಂದ ಆರಂಭಿಸಿ 'ಶರಣು ಬೆನಕನೇ' (ಪುರಂದರದಾಸರು-ಗೌಳ), 'ನಿರವಧಿ ಸುಖದಾ' (ತ್ಯಾಗರಾಜರು-ರವಿಚಂದ್ರಿಕೆ), 'ಹರಿನಾಮ ಕೀರ್ತನೆ' (ಪುರಂದರದಾಸರು-ಆರಭಿ) 'ಮನಸಾ ಎಟುಲೋ' (ತ್ಯಾಗರಾಜರು-ಮಲಯ ಮಾರುತ), 'ಬರುತಲಿರುವುದು ಶ್ರಾವಣ' (ದ.ರಾ. ಬೇಂದ್ರೆ-ದೇಶ್)ಗಳನ್ನು ಹಾಡಿದರು. ಸೌಮ್ಯರ ಷಣ್ಮುಖ ಪ್ರಿಯದ ಆಲಾಪನೆ, 'ಗೋವಿಂದಾ ನಿನ್ನ ಆನಂದ' ಪುರಂದರದಾಸರ ಕೃತಿಗೆ ಅಳವಡಿಸಿದ್ದ ನೆರವಲ್ ಮತ್ತು ಸ್ವರ ಪ್ರಸ್ತಾರಗಳು ಸುಲಲಿತವಾಗಿ ಮೂಡಿ ಬಂದು ತಾನು ಮುಂದೆ ಉತ್ತಮ ಸಂಗೀತಗಾರಳಾಗುವೆನೆಂಬ ಭರವಸೆ ತಂದಳು. ಮಂಗಳಾ ಅನಂತ ಸ್ವಾಮಿ ರಚಿಸಿದ 'ಭಕ್ತಿ ಭಂಡಾರವನು' (ಆನಂದ ಭೈರವಿ), ಡಾ। ಮಾಸ್ತಿಯವರ

# ಸುತ್ತಮುತ್ತ

'ನಿನ್ನ ಗಾನದೊಳು ಎಲ್ಲಾ ದನಿಗಳು ಸೇರಿ' (ರಾಗ ಮಾಲಿಕೆ) ಸೊಗಸಾಗಿ ಮೂಡಿ ಬಂತು. ಮರಾಠಿ ಅಭಂಗ ಮತ್ತು ತಿಲ್ಲಾನಗಳು ಸಹ ರಸಿಕರ ಮೆಚ್ಚುಗೆಗೆ ಪಾತ್ರವಾಯಿತು. ಅಚ್ಯುತ ಪಿಟಿಲಿನಲ್ಲಿ, ಕಾರ್ತಿಕ್ ಮೃದಂಗದಲ್ಲಿ ಉತ್ತಮವಾಗಿ ಸಹಕರಿಸಿದರು.

ಸಭೆಯಲ್ಲಿ ಖ್ಯಾತ ವಿಮರ್ಶಕ ಮೈಸೂರು ಸುಬ್ರಮಣ್ಯ ಹಾಗೂ ಮುಂಬಯಿಯ ಪ್ರಮುಖ ಕನ್ನಡಿಗ ಕೆ. ಮಂಜುನಾಥಯ್ಯನವರು ಉಪಸ್ಥಿತರಿದ್ದು ಈ ಭರವಸೆಯ ಕಿರಿಯ ಕಲಾವಿದರನ್ನು ಪ್ರೋತ್ಸಾಹಿಸಿದರು.

## ದೂರದರ್ಶನ -'ಚಂದನ'ದಲ್ಲಿ ಡೊಂಬಿವಿಲಿ ಕಲಾವಿದರು

ಕನ್ನಡ ಭವನದ ಕಾರ್ಯಕ್ರಮಗಳನ್ನು ವೀಕ್ಷಿಸಿ-ಆಲಿಸಿದ ಸಂಗೀತ ಪ್ರೇಮಿ ಅಭಿಮಾನಿಯೊಬ್ಬರು ದೂರದರ್ಶನ-ಚಂದನಕ್ಕೆ ಶಿಫಾರಸು ಮಾಡಿ ಈ ಕಿರಿಯ ಕಲಾವಿದರು ಪ್ರತಿ ಶುಕ್ರವಾರ ಪ್ರಸಾರವಾಗುವ 'ಚಿತ್ತಾರ' ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಸೌಮ್ಯ, ಗಾಯತ್ರಿ, ಸುಕನ್ಯರವರು 'ಗೋವಿಂದ ನಿನ್ನ ಆನಂದ', 'ದೇವರ ನಾಮ', 'ದಯೆಯಿಲ್ಲದ ಧರ್ಮ', ವಚನ, ಕುವೆಂಪು ಕವನ 'ಎಲ್ಲೆಲ್ಲಿಯೂ ನೀನಿಹೆಯಂತೆ'ಗಳನ್ನು ಸಾದರಪಡಿಸಿದರು. ಈ ಕಾರ್ಯಕ್ರಮವು ದಿನಾಂಕ 30-5-2003ರಂದು ಚಂದನದಲ್ಲಿ ಪ್ರಸಾರವಾಯಿತು.

ಈ ಕಿರಿಯ ಕಲಾವಿದರು ಪ್ರಸ್ತುತ ಪಡಿಸಿದ ಕಾರ್ಯಕ್ರಮಗಳು ರಸಿಕರೇ ಅಲ್ಲದೆ ಸ್ಥಳೀಯ ಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ವಿಜಯ ಕರ್ನಾಟಕದ ವಿಮರ್ಶಕರಿಂದಲೂ ಪ್ರಶಂಸೆ ಪಡೆದುದು ಮುಂಬಯಿ ಕನ್ನಡಿಗರು ಹೆಮ್ಮೆ ಪಡುವಂತಾಗಿದೆ.

## ಸಂಗೀತ ವಿದುಷಿ ಶ್ರೀಮತಿ ಉಮಾ ನಾಗಭೂಷಣ್‌ರವರ ವಿದ್ವತ್ ಪೂರ್ಣ ಗಾಯನ

ಮುಂಬಯಿಯ ಸಂಗೀತ ವಿದುಷಿ ಶ್ರೀಮತಿ ಉಮಾ ನಾಗಭೂಷಣ್‌ರವರ ಸಂಗೀತ ಕಚೇರಿಗಳು ಬೆಂಗಳೂರಿನಲ್ಲಿ ಪರ್ಕಸಿವ್ ಆರ್ಟ್ಸ್ ಸೆಂಟರ್ ಮತ್ತು ಸುಚಿತ್ರ ಕಲಾವಿದರ ಆಶ್ರಯದಲ್ಲಿ ಹಾಗೂ ಡಿ. ಸುಬ್ಬ ರಾಮಯ್ಯ ಫೈನ್ ಆರ್ಟ್ಸ್ ಟ್ರಸ್ಟ್‌ನ ಆಶ್ರಯದಲ್ಲಿ, ಗಾನ ಕಲಾ ಸಿಂಧು ಡಿ. ಸುಬ್ಬ ರಾಮಯ್ಯನವರ ಜನ್ಮ ಶತಮಾನೋತ್ಸವದ ಸಲುವಾಗಿ ಏರ್ಪಡಿಸಲಾಗಿತ್ತು. ಈ ಎರಡೂ ಸಂಗೀತ ಕಚೇರಿಗಳಲ್ಲಿ ಶ್ರೀಮತಿ ಉಮಾರವರು ವರ್ಣ, ಪುರಂದರದಾಸ, ತ್ಯಾಗರಾಜ, ದೀಕ್ಷಿತರ ಕೃತಿಗಳನ್ನೇ ಅಲ್ಲದೇ ಮುಂಬಯಿನ ಶ್ರೀ ಸಿ.ಕೆ. ಶಂಕರನಾರಾಯಣ ರಾವ್ ಮತ್ತು ಕಲ್ಯಾಣಿ ವರದರಾಜನ್ ಕೃತಿಗಳನ್ನು ಸಾದರಪಡಿದರು. ಶ್ರೀ ಪುರಂದರದಾಸರ 'ದೂರು ಮಾಡುವರೇನೇ ರಂಗಯ್ಯನ' (ಬೇಗಡೆ), 'ವ್ಯರ್ಥವಾಯಿತೇ ಜನುಮ' (ರೇವತಿ) ಕೃತಿಗಳನ್ನು ವಿಸ್ತಾರವಾದ ರಾಗಾಲಾಪನೆ, ನೆರವಲ್, ಸ್ವರ ಪ್ರಸ್ತಾರಗಳೊಂದಿಗೆ ಸಾದರ ಪಡಿಸಿದುದು ಅವರ ವಿದ್ವತ್ತಿಗೆ ಸಾಕ್ಷಿಯಾಗಿತ್ತು. ಎರಡೂ ಕಚೇರಿಗಳಲ್ಲಿ ವ್ಯವಸ್ಥಾಪಕರ ಆದೇಶದಂತೆ ರಾಗ, ತಾನ, ಪಲ್ಲವಿಗಳನ್ನು ಪಾಂಡಿತ್ಯಪೂರ್ಣವಾಗಿ ಪ್ರಸ್ತುತಪಡಿಸಿ ರಸಿಕರ ಮತ್ತು ವಿದ್ವಾಂಸರ ಮೆಚ್ಚುಗೆ ಗಳಿಸಿದರು.

**MATRIMONIAL**

Alliance invited for Dr. Gautam Venkatesh Kikeri MDS (Master of Dental Surgery). He is 29 yrs. 5' 10" tall. We are from Kashyap Gotra. Boy has done BDS from Dharwad and MDS from Moscow. Has also appeared for National Board in U.S.A. We need a girl who is between 26 to 28 yrs. Doctor or software professional, good looking adjusting to the family also. Father also Dentist for 35 yrs. Rest to be spoken directly.

*Contact* : 2570 0151/2570 3736


**TRIMURTI**
**JEWELLERS**

GOLD AND DIAMOND ORNAMENTS

460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.)
Mumbai-400 019.

Phone : **2402 3485**

## सिरि भूवलय SIRI BHOOVALAYA ಸಿರಿಭೂವಲಯ



## OBITUARY

We are deeply grieved to inform our members about the sad and sudden demise of our member Shri E.R. Krishna at Bangalore recently. Krishna was in his 60's and was not keeping well for a short period.

Krishna was a very active member of the Association and was one of the Jt. Secretaries in 1970-71. He had been active member of our dramatic troupe and acted in many plays. He moved out to Bangalore mid 70's and settled there. He had many friends in the Association and outside who will miss him.

We pray that his family members are endowed with the strength to bear this loss.

May his soul rest in peace.

### ನಾಟಕ ವಾಚನ

೨೩ ಜೂನ್ ೨೦೦೩ ಸಂಜೆ ೭ ಗಂಟೆಗೆ

## 'ವೃದ್ಧಾಶ್ರಮ'

ಶ್ರೀ ಬಾಲಕೃಷ್ಣ ನಿಡ್ವಣ್ಣಾಯ ಮತ್ತು ತಂಡದವರಿಂದ.

ಸ್ಥಳ : ಮೈಸೂರು ಅಸೋಸಿಯೇಶನ್.

ಎಲ್ಲರಿಗೂ ಸ್ವಾಗತ



*Mr. Om Katare who conducted the workshop for the second group with the children*



*One of the participants, Marta Vishal Devadiga receiving a certificate of participation from Mr. Kuldeep Singh, Mr. Ramesh Talwar and Mr. Om Katare*

Regn. No. 040155/83
Regn. No. TECH/47-202/MBI-2002
Date of Posting : 10-6-2003

(...from. pg. 2)

# "Theatre workshop" Some more scenes

were made by the children during the workshop held from 1st May to 10th May.

Mr. M.A.N. Prasad, Secretary of the Mysore Association welcomes the audience and gave them a brief out line on the workshops and their purpose. Mrs. Sulabha Arya, a well known T.V. and film artiste, was the chief guest. Ms. Shaili Satyu spoke of her experience with children. The children presented a few skits through the medium of puppets. At the end Mrs. Arya presented a certificate of participation to all the children.



***Another scene of the puppet show***

The second workshop started on 14th May and continued till 24th May. There were 35 participants for this workshop and it was conducted by Mr. Om Katare of YATRI. This was for children in the age range of 10-16 years. The children learnt the art of performing skits with their own plots and dialogues. They presented their skills on 25th May. Mr. Kuldeep Singh, Hon. Secretary of IPTA and Mr. Ramesh Talwar, well known director were present. Both Mr. Singh and Mr. Talwar appreciated the efforts of Mr. Katare in training such a large group and the enthusiasm shown by the children. At the end of the session, Mr. Kuldeep Singh presented the certificates to all the participants.



***Children at the workshop sessions, rehearsing a scene.***

The third workshop began on 27th May and went on till 7th June. It had 23 participants in the age range of 10-16 years. It was conducted by Ms. Sathyu for the first five days and Mr. Katare for the remaining days. The presentation ceremony was held on 7th June in presence of Mr. S. Doreswamy, the President of Mysore Association, Mr. Kuldeep Singh, Hon. Secretary of IPTA and Mr. Ramesh Talwar. Mr. Katare mentioned that the very fact that this group had 5-6 repeaters which was proof enough that the workshops were a huge success with the children and parents. Mr. Doreswamy presented the certificates to the participants.




***A scene from the skit staged by the participants of the second workshop on 25th May, 2003.***

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647
Printed at Aarati Art Printers, Fort, Mumbai-400 001. * 2266 3361 / 2266 5938